**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007**
**ಪ್ರಕರಣಗಳ ಕ್ರಮ ಪಟ್ಟಿ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**
**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ
4. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ
5. ನೋಂದಣಿಗಾಗಿ ಅರ್ಜಿ
6. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಪೂರ್ವ ಅಗತ್ಯತೆಗಳು
7. ಅರ್ಜಿಗಳ ವಿಲೆ
8. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಪ್ರಕಾರ್ಯಗಳು
9. ಗುಣಮಟ್ಟಗಳು

9ಎ. ತಜ್ಞರ ಸಮಿತಿಗಳು ಮತ್ತು ಇತರ ಸಮಿತಿಗಳ ಪ್ರಕಾರ್ಯಗಳು

10. ಅಧಿಸೂಚಿಸಬೇಕಾದ ಚಾರ್ಜುಗಳ ಅನುಸೂಚಿ ಮತ್ತು ಸಂಸ್ಥೆಯ ವಿವರಗಳು
11. ಖಾಸಗಿ ವೈದ್ಯಕೀಯ ಸಂಸ್ಥೆಗಳ ಅವಶ್ಯ ಕರ್ತವ್ಯಗಳು

11ಎ. ರೋಗಿಯ ಚಾರ್ಟರ್ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರ್

11ಬಿ. ಅನುಸೂಚಿಯನ್ನು ತಿದ್ದುಪಡಿ ಮಾಡಲು ರಾಜ್ಯ ಸರ್ಕಾರದ ಅಧಿಕಾರ

12. ಚಿಕಿತ್ಸಾ ದಾಖಲೆಗಳ ನಿರ್ವಹಣೆ
13. ಮಾಹಿತಿಯನ್ನು ಪಡೆಯುವ ಪ್ರಕ್ರಿಯೆ
14. ಮಾಹಿತಿಯನ್ನು ಒದಗಿಸುವುದಕ್ಕಾಗಿ ನಿರ್ಬಂಧಗಳು
15. ಜುಲ್ಮಾನೆ ಅಥವಾ ನೋಂದಣಿಯ ಅಮಾನತು ಅಥವಾ ರದ್ಧತಿ
16. ಅಪೀಲು ಪ್ರಾಧಿಕಾರ
17. ಅಪೀಲು
18. ಖಾಸಗಿ ವೈದ್ಯಕೀಯ ಸಂಸ್ಥೆಗಳು ತಮ್ಮಲ್ಲಿರುವ ಸರ್ಕಾರಿ ವೈದ್ಯರುಗಳ ಹೆಸರುಗಳನ್ನು ವರದಿಮಾಡುವುದು
19. ದಂಡನೆಗಳು

19ಎ. ಅಪರಾಧದ ಸಂಜ್ಞೇಯತೆ

19ಬಿ. ದಂಡಾಧಿಕಾರಿಗಳ ಅಧಿಕಾರವ್ಯಾಪ್ತಿ

20. ಕಂಪನಿಯಿಂದ ಅಪರಾಧಗಳು
21. ಪ್ರವೇಶ, ಪರಿಶೀಲನೆ ಇತ್ಯಾದಿಗಳ ಅಧಿಕಾರ
22. ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಆವರಣಗಳನ್ನು ಸೀಲ್ ಮಾಡುವುದು
23. ನೋಂದಣಿ ಅಧಿಕಾರಿಗಳಿಗೆ ನಿರ್ದೇಶನ ನೀಡಲು ರಾಜ್ಯಸರ್ಕಾರದ ಅಧಿಕಾರಗಳು
24. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
25. ತೊಂದರೆಗಳ ನಿವಾರಣೆ
26. ನಿಯಮಗಳ ರಚನಾಧಿಕಾರ
27. ನಿಯಮಗಳು ಮತ್ತು ಆದೇಶಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕು
28. ನಿರಸನ ಮತ್ತು ಉಳಿಸುವಿಕೆಗಳು

ಅನುಸೂಚಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**2007ರ ಅಧಿನಿಯಮ ಸಂಖ್ಯೆ 21.–** ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳ ಮೇಲೆ ಪರಿಣಾಮಕಾರಿ ನಿಯಂತ್ರಣವನ್ನು ಹೊಂದಲು ಕರ್ನಾಟಕ ಖಾಸಗಿ ನರ್ಸಿಂಗ್ ಹೋಂ (ವಿನಿಯಮನ) ಅಧಿನಿಯಮ, 1976ರ ಬದಲಿಗೆ ಒಂದು ಸಮಗ್ರ ಶಾಸನವನ್ನು ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ವಿಧೇಯಕವು ಇತರ ಅಂಶಗಳ ಜೊತೆಯಲ್ಲಿ ಈ ಮುಂದಿನವುಗಳಿಗೆ ಉಪಬಂಧಗಳನ್ನು ಕಲ್ಪಿಸಿದೆ:–

(i) ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ;

(ii) ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಇರಬೇಕಾದ ಅಗತ್ಯ ಅಂಶಗಳು;

(iii) ಸ್ಥಳೀಯ ಪರಿಶೀಲನಾ ಸಮಿತಿಯ ರಚನೆ;

(iv) ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಇರಬೇಕಾದ ಮಾನಕ ಗುಣಮಟ್ಟಗಳನ್ನು ನಿಗದಿಪಡಿಸುವುದು;

(v) ವಿವಿಧ ವೈದ್ಯಕೀಯ ಚಿಕಿತ್ಸೆಗಳಿಗೆ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡಬೇಕಾದ ಚಾರ್ಜುಗಳ ಪಟ್ಟಿಯನ್ನು ಕಿರುಮಡಿಕೆಗಳು ಹಾಗೂ ಕಿರುಹೊತ್ತಿಗೆಗಳ ರೂಪದಲ್ಲಿ ಅಧಿಸೂಚಿಸುವುದನ್ನು ಅಗತ್ಯಪಡಿಸುವುದು;

(vi) ಖಾಸಗಿ ವೈದ್ಯಕೀಯ ಸಂಸ್ಥೆಗಳು ನಿರ್ವಹಿಸಬೇಕಾಸ ಶಾಸನಾತ್ಮಕ ಹೊಣೆಗಾರಿಕೆಗಳನ್ನು ನಿಯಮಿಸುವುದು;

(vii) ಚಿಕಿತ್ಸಾ ದಾಖಲೆಗಳನ್ನು ನಿರ್ವಹಿಸುವುದು;

(viii) ವ್ಯಕ್ತಿಗೆ ಸಂಬಂಧಿಸಿದ ನಿಗಾ, ಚಿಕಿತ್ಸೆ, ತಪಾಸಣೆ, ಸಲಹೆ ಹಾಗೂ ರೋಗ ನಿದಾನ ಅಭಿಪ್ರಾಯಗಳ ಸಾರಾಂಶದ ಪ್ರತಿಯನ್ನು ವ್ಯಕ್ತಿಗೆ ಅಥವಾ ಆತನ ಕುಟುಂಬದ ಸದಸ್ಯರಿಗೆ ಒದಗಿಸುವುದು;

(ix) ನೋಂದಣಿಯನ್ನು ಅಮಾನತುಗೊಳಿಸುವುದು ಅಥವಾ ರದ್ದುಗೊಳಿಸುವುದು;

(x) ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡಗಳು ಮತ್ತು ನೋಂದಣಿಯನ್ನು ರದ್ದುಗೊಳಿಸುವುದು.

ಇತರ ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ಉ.S.R (ಇ) ಪಬಂಧಗಳನ್ನು ಸಹ ರಚಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2007ರ ವಿಧಾನಸಭೆಯ ವಿಧೇಯಕ ಸಂಖ್ಯೆ:10]

[ಭಾರತದ ಸಂವಿಧಾನದ ಏಳನೆಯ ಅನುಸೂಚಿಯ ಎರಡನೇ ಪಟ್ಟಿಯ 6ನೇ ನಮೂದನೆಯಡಿಯಲ್ಲಿ ಬರುತ್ತದೆ.]

II

**2010ರ ಅಧಿನಿಯಮ ಸಂಖ್ಯೆ 33:** ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,–

(1) ಅಸ್ತಿತ್ವದಲ್ಲಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ನಿಯಮಿಸಿದ ಅವಧಿಯ ವಿಸ್ತರಣೆ; ಮತ್ತು

(2) ಜಿಲ್ಲಾ ಮಟ್ಟದ ನೋಂದಣಿ ಪ್ರಾಧಿಕಾರದ ಪುನರ್ ರಚನೆ.

ಆದ್ದರಿಂದ ಈ ವಿಧೇಯಕ.
(2010ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 26, ಕಡತ ಸಂಖ್ಯೆ. ಸಂವ್ಯಶಾಇ 21 ಶಾಸನ 2010)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 6ನೇ ಮತ್ತು 3ನೇ ಪಟ್ಟಿಯ 26ನೇ ನಮೂದನೆಯಡಿಯಲ್ಲಿ ಬರುತ್ತದೆ.)

**III**

**2012ರ ಅಧಿನಿಯಮ ಸಂಖ್ಯೆ 37.–** ಅಸ್ತಿತ್ವದಲ್ಲಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ರ ಅಡಿಯಲ್ಲಿ ನೋಂದಾಯಿಸಲು ನಿಯಮಿಸಲಾದ ಅವಧಿಯನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2012ರ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳ ವರೆಗೆ ವಿಸ್ತರಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಸದರಿ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2012ರ ವಿಧಾನಸಭೆಯ ವಿಧೇಯಕ ಸಂಖ್ಯೆ:7, ಕಡತ ಸಂಖ್ಯೆ:ಸಂವ್ಯಶಾಇ 4 ಶಾಸನ 2012)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 6 ಹಾಗೂ 3ನೇ ಪಟ್ಟಿಯ 26ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**IV**

**2018ರ ಅಧಿನಿಯಮ ಸಂಖ್ಯೆ 01.–** ಉಭಯ ಸದನಗಳ ಜಂಟಿ ಪರಿಶೀಲನಾ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿ ಮತ್ತು ವೈದ್ಯರ ಸಂಘಗಳ ಪ್ರತಿನಿಧಿಗಳೊಂದಿಗೆ ಚರ್ಚೆಗಳನ್ನು ನಡೆಸಿದ ತರುವಾಯ, ಈ ಮುಂದಿನವುಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007ನ್ನು (2007ರ ಕರ್ನಾಟಕ ಅಧಿನಿಯಮ 21) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ;–

- (i) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವನ್ನು ಪುನರ್ ರಚಿಸುವುದು;
- (ii) ಖಾಸಗಿ ವೈದ್ಯಕೀಯ ಸಂಸ್ಥೆಗಳ ದರಗಳ ಪ್ರದರ್ಶನದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವುದು;
- (iii) ಸರ್ಕಾರದ ಆರೋಗ್ಯ ಭರವಸೆ ಸ್ಕೀಮುಗಳ ಅಡಿಯಲ್ಲಿ ಚಿಕಿತ್ಸೆ ಮತ್ತು ಚಿಕಿತ್ಸಾ ವಿಧಾನಗಳಿಗಾಗಿ ಏಕರೂಪ ಪ್ಯಾಕೇಜು ದರಗಳನ್ನು ನಿಗದಿಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುವುದು;
- (iv) ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮದ ಅನುಸೂಚಿಯಲ್ಲಿ ರೋಗಿಗಳ ಚಾರ್ಟರನ್ನು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರನ್ನು ನಿರ್ದಿಷ್ಟಪಡಿಸುವುದು;
- (v) ರೋಗಿಗಳ ಚಾರ್ಟರನ್ನು ಅಥವಾ ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರನ್ನು ಅನುಪಾಲಿಸದೇ ಇರುವ ಸಂದರ್ಭದಲ್ಲಿ ಹಣ ರೂಪದ ದಂಡವನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು;
- (vi) 12ನೇ ಮತ್ತು 13ನೇ ಪ್ರಕರಣಗಳ ಉಲ್ಲಂಘನೆಯ ಸಂದರ್ಭದಲ್ಲಿ ಕಾರಾವಾಸ ಶಿಕ್ಷೆ ವಿಧಿಸುವ ಉಪಬಂಧಗಳನ್ನು ತೆಗೆದುಹಾಕುವುದು;

(vii) ನಿರ್ದಿಷ್ಟ ಪ್ರಕರಣಗಳಲ್ಲಿ ರೋಗಿಗಳಿಂದ ಅಥವಾ ರೋಗಿಗಳ ಪ್ರತಿನಿಧಿಗಳಿಂದ ಮುಂಗಡ ಹಣ ಸಂದಾಯಕ್ಕೆ ಒತ್ತಾಯಿಸದೇ ಅಗತ್ಯವಿರುವ ತುರ್ತು ಚಿಕಿತ್ಸೆಯನ್ನು ಒದಗಿಸುವುದು;

(viii) ಬಾಕಿಗಳ ಪೂರ್ವ ಸಂದಾಯಕ್ಕೆ ಒತ್ತಾಯಿಸದೇ ಮೃತ ರೋಗಿಯ ಪ್ರತಿನಿಧಿಗಳಿಗೆ ಮೃತನ ದೇಹವನ್ನು ಒಪ್ಪಿಸುವುದು;

(ix) 19ನೇ ಪ್ರಕರಣದಡಿಯಲ್ಲಿ ವಿಧಿಸಬಹುದಾದ ಕೆಲವು ಹಣರೂಪದ ದಂಡಗಳನ್ನು ಹೆಚ್ಚಿಸುವುದು;

(x) ಕೆಲವು ಇತರ ಆನುಷಂಗಿಕ ಅಥವಾ ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ 44, ಕಡತ ಸಂಖ್ಯೆ:ಸಂವ್ಯಶಾಇ 33 ಶಾಸನ 2017)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 6ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## V

**ತಿದ್ದುಪಡಿ ಅಧಿನಿಯಮ ಸಂಖ್ಯೆ 2020ರ 33.-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕ್ಷೇತ್ರವ್ಯಾಪ್ತಿಯಲ್ಲಿ ಪ್ರತ್ಯೇಕ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ ಹಾಗೂ ಅಪೀಲು ಪ್ರಾಧಿಕಾರಕ್ಕಾಗಿ ಉಪಬಂಧಗಳನ್ನು ಕಲ್ಪಿಸಲು ಹಾಗೂ ಕೋವಿಡ್-19 ಪ್ರಕರಣಗಳನ್ನು ಸಂಪೂರ್ಣವಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 21) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಹಾಗೂ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಮೇಲಿನ ಧ್ಯೇಯೋದ್ದೇಶವನ್ನು ಸಾಧಿಸುವುದಕ್ಕಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 17)ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 38, ಕಡತ ಸಂಖ್ಯೆ: ಸಂವ್ಯಶಾಇ 59 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 6ನೇಯ ನಮೂದನೆಯಡಿಯಲ್ಲಿ ಬರುತ್ತದೆ]

****

**2007ರ ಕರ್ನಾಟಕ ಅಧಿನಿಯಮ ಸಂಖ್ಯೆ. 21**

(2007ರ ಆಗಸ್ಟ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007**

(2007ರ ಆಗಸ್ಟ್ ಹದಿಮೂರನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)

(2010ರ ಅಧಿನಿಯಮ ಸಂಖ್ಯೆ 33, 2012ರ 37, 2018ರ 01 ಹಾಗೂ 2020ರ 33ರಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪುರೋಭಿವೃದ್ಧಿ ಮತ್ತು ಅವುಗಳ ಮೇಲ್ವಿಚಾರಣೆಗೆ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮ ಗುಣಮಟ್ಟದ ಆರೋಗ್ಯಪಾಲನೆಗೆ ಉತ್ತೇಜನ ನೀಡುವುದು ಮತ್ತು ವೈದ್ಯ ಧರ್ಮದ ತತ್ವಗಳಿಗನುಸಾರವಾಗಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ಒದಗಿಸಬೇಕಾದ ಸೇವೆಯ ಗುಣಮಟ್ಟಗಳನ್ನು ನಿಗದಿಪಡಿಸುವ ಮೂಲಕ ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳ ವ್ಯವಹಾರಗಳನ್ನು ಕಾನೂನಿನ ಮೂಲಕ ನಿಯಂತ್ರಿಸಿ ಮೇಲ್ವಿಚಾರಣೆ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮವು ದಿನಾಂಕ: 10.11.2009ರಿಂದ ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ 94 ಸಿಜಿಇ 2008ರ ಮೂಲಕ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಪೀಲು ಪ್ರಾಧಿಕಾರ" ಎಂದರೆ, 16ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಪೀಲು ಪ್ರಾಧಿಕಾರ;

(ಬಿ) "ಗೊತ್ತುಪಡಿಸಲಾದ ದಿನ" ಎಂದರೆ, 1ನೇ ಪ್ರಕರಣದ (2)ನೇ ಉಪ-ಪ್ರಕರಣದಡಿ ಗೊತ್ತುಪಡಿಸಲಾದ ದಿನಾಂಕ;

(ಸಿ) "ಚಿಕಿತ್ಸಾ ಪ್ರಯೋಗಾಲಯ" ಎಂದರೆ,-

(i) ಜೀವ ವೈಜ್ಞಾನಿಕ (ರೋಗಪತ್ತೆ ಶಾಸ್ತ್ರದ), ಸೂಕ್ಷ್ಮಾಣು ಜೀವಿಶಾಸ್ತ್ರದ, ಕ್ಷ-ಕಿರಣ, ಸೂಕ್ಷ್ಮದರ್ಶಿ, ರಾಸಾಯನಿಕ ಅಥವಾ ಇತರೇ ಪರೀಕ್ಷೆಗಳನ್ನು, ತಪಾಸಣೆಗಳನ್ನು ಅಥವಾ ವಿಶ್ಲೇಷಣೆಗಳನ್ನು ಮಾಡುವ; ಅಥವಾ

(ii) ಸೂಕ್ಷ್ಮಜೀವಿ ಕಲ್ಚರ್‌ಗಳು, ರಸಿಕೆಗಳು, ಲಸಿಕೆಗಳು ಅಥವಾ ಇತರ ಜೀವಶಾಸ್ತ್ರ ಅಥವಾ ಸೂಕ್ಷ್ಮಾಣು ಜೀವಿಶಾಸ್ತ್ರದ ಉತ್ಪನ್ನಗಳನ್ನು ರೋಗಗಳ ಪತ್ತೆ ಅಥವಾ ಚಿಕಿತ್ಸೆಯ ಸಂಬಂಧದಲ್ಲಿ ತಯಾರಿಸುವುದು ಅಥವಾ ವಾಡಿಕೆಯಾಗಿ ತಯಾರಿಸುವುದನ್ನು ಮಾಡುವ;

– ಒಂದು ಸಂಸ್ಥೆ;

(ಡಿ) "ಚಿಕಿತ್ಸಾ ದಾಖಲೆಗಳು" ಎಂದರೆ, ಮಾನವ ಶರೀರ ಅಥವಾ ಅದರ ಯಾವುದೇ ಒಂದು ಭಾಗ ಅಥವಾ ಅದರಿಂದ ತೆಗೆದುಕೊಳ್ಳಲಾಗುವ ಯಾವುದೇ ವಸ್ತುವಿನ ಯಾವುದೇ ಸ್ಥಿತಿಗತಿಯನ್ನು ಮತ್ತು ಆ ವ್ಯಕ್ತಿಗೆ ನೀಡಲಾದ ಅಥವಾ ಆತ ಒಳಗಾದ ಚಿಕಿತ್ಸೆಯ ಕ್ರಮವನ್ನು ಸೂಚಿಸಲು ಮತ್ತು ಪತ್ತೆ ಹಚ್ಚಲು, ಅಥವಾ ಅರ್ಥ ಮಾಡಿಕೊಳ್ಳಲು ಬಳಸಬಹುದಾದಂಥ ಯಾವುದೇ ಕಾಗದ, ಮುದ್ರಿತ ಫಿಲ್ಮು, ಸ್ಲೈಡು, ದ್ರಾವಣ ಅಥವಾ ಮಾಧ್ಯಮ.

(ಇ) "ಇಲಾಖೆ" ಎಂದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಥವಾ ಸಂದರ್ಭಾನುಸಾರ ಕರ್ನಾಟಕ ಸರ್ಕಾರದ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ;

(ಎಫ್) "ಕುಟುಂಬದ ಸದಸ್ಯ" ಎಂದರೆ, ಗಂಡ ಅಥವಾ ಹೆಂಡತಿ ಅಥವಾ ಯಾವೊಬ್ಬ ಮಗ, ಮಗಳು ಅಥವಾ ಯಾವೊಬ್ಬ ಇತರ ಕಾನೂನು ಸಮ್ಮತ ವಾರಸುದಾರ ಅಥವಾ ಆತನ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳದೆ ಕಾನೂನು ಸಮ್ಮತ ಸಂರಕ್ಷಕ.

[2][(ಎಫ್–1) "ಕುಂದುಕೊರತೆ" ಎಂದರೆ, ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಚಾರ್ಟರನ್ನು ಪಾಲಿಸದೇ ಇರುವ ಸಂಬಂಧದಲ್ಲಿಯ ಯಾವುದೇ ದೂರು;][2]

(ಜಿ) "ಆರೋಗ್ಯಕಾರಿ" ಎಂದರೆ, ಉತ್ತಮ ಆರೋಗ್ಯಕ್ಕೆ ಅನುಕೂಲಕರವಾದ ಒಂದು ಪರಿಸ್ಥಿತಿ;

[3]["(ಎಚ್) "ಪರಿಶೀಲನಾ ಸಮಿತಿ" ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ಪರಿಶೀಲನಾ ಸಮಿತಿ;"][3]

(ಐ) ಖಾಸಗಿ ವೈದ್ಯಕೀಯ ಸಂಸ್ಥೆಗೆ ಸಂಬಂಧಿಸಿದಂತೆ "ವ್ಯವಸ್ಥಾಪಕ" ಎಂದರೆ, ಆತನ ಹೆಸರು ಅಥವಾ ಪದನಾಮ ಯಾವುದೇ ಇರಲಿ, ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನಡೆಸುವ ಅಥವಾ ನಿರ್ವಹಣೆಯ ಪ್ರಭಾರವನ್ನು ಹೊಂದಿರುವ ಅಥವಾ ವಹಿಸಿಕೊಂಡಿರುವ, ಒಬ್ಬ ವ್ಯಕ್ತಿ;

(ಜೆ) "ಪ್ರಸೂತಿ ಗೃಹ" ಎಂದರೆ, ಶಿಶುಜನನಕ್ಕೆ ಸಂಬಂಧಿಸಿದಂತೆ ಹೆರಿಗೆಗಾಗಿ ಮತ್ತು ಗರ್ಭಿಣಿಯರ ಪೂರ್ವದ ಅಥವಾ ಬಾಣಂತಿಯರ ಶುಶ್ರೂಷೆಯ ಉದ್ದೇಶಕ್ಕಾಗಿ ಸಾಮಾನ್ಯವಾಗಿ ಮಹಿಳೆಯರನ್ನು ಬರಮಾಡಿಕೊಳ್ಳುವ ಅಥವಾ ದಾಖಲು ಮಾಡಿಕೊಳ್ಳುವ ಅಥವಾ ಇವೆರಡಕ್ಕಾಗಿಯೂ ಇರುವ ಸಂಸ್ಥೆ ಹಾಗೂ ಇದು ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗಾಗಿ ಅಥವಾ ವೈದ್ಯಕೀಯ ಗರ್ಭಪಾತದ ಉದ್ದೇಶಕ್ಕಾಗಿ ಮಹಿಳೆಯರನ್ನು ಬರಮಾಡಿಕೊಳ್ಳುವ ಅಥವಾ ದಾಖಲುಮಾಡಿಕೊಳ್ಳುವ ಸಂಸ್ಥೆಯನ್ನೂ ಒಳಗೊಳ್ಳುತ್ತದೆ;

(ಕೆ) "ವೈದ್ಯವೃತ್ತಿಗ" ಎಂದರೆ, ವೈದ್ಯವೃತ್ತಿಗನು ತಾನು ವ್ಯಾಸಂಗ ಮಾಡಿದ, ಅರ್ಹತೆ ಪಡೆದ ಮತ್ತು ನೋಂದಾಯಿತನಾದ ವೈದ್ಯ ಪದ್ಧತಿಯಲ್ಲಿ ವೃತ್ತಿ ನಡೆಸುವುದಕ್ಕಾಗಿ ಹೋಮಿಯೋಪತಿ ವೃತ್ತಿಗರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 35), ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಅಥವಾ ಯೋಗ ವೈದ್ಯ ವೃತ್ತಿಗರ ನೋಂದಣಿ ಮತ್ತು ವೈದ್ಯ ವೃತ್ತಿಗರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 9), ವೈದ್ಯಕೀಯ ನೋಂದಣಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 34), ಭಾರತೀಯ ವೈದ್ಯ ಕೇಂದ್ರ ಪರಿಷತ್ತು ಅಧಿನಿಯಮ, 1970 (1970ರ ಕೇಂದ್ರ ಅಧಿನಿಯಮ 48) ಹೋಮಿಯೋಪತಿ ಕೇಂದ್ರ ಪರಿಷತ್ತು ಅಧಿನಿಯಮ, 1978 (1973ರ ಕೇಂದ್ರ ಅಧಿನಿಯಮ 59) ಮತ್ತು ವೈದ್ಯ ಪರಿಷತ್ತು ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 102) ಇವುಗಳಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಕ್ತಿ ಮತ್ತು ದಂತವೈದ್ಯರುಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 16) ಅಡಿಯಲ್ಲಿ ನೋಂದಾಯಿತನಾದ ಒಬ್ಬ ದಂತವೈದ್ಯನನ್ನೂ ಇದು ಒಳಗೊಳ್ಳುತ್ತದೆ;

(ಎಲ್) "ವೈದ್ಯಕೀಯ ಚಿಕಿತ್ಸೆ" ಎಂದರೆ, ಅಲೋಪತಿಯ ಅಥವಾ ಇತರ ಯಾವುದೇ ಮಾನ್ಯತೆ ಪಡೆದ ವೈದ್ಯ ಪದ್ಧತಿಗಳಾದಂಥ ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ, [1][ಸಂಯೋಜಿತ ವೈದ್ಯಪದ್ಧತಿ,][1] ಪ್ರಕೃತಿ ಚಿಕಿತ್ಸೆ ಮತ್ತು ಸಿದ್ಧ ಇವುಗಳ ಮೂಲಕ ಯಾವೊಬ್ಬ ವ್ಯಕ್ತಿಯ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಅಥವಾ ಯಾವುದೇ ರೋಗವನ್ನು ಗುಣಪಡಿಸಲು ಅಥವಾ ತಡೆಗಟ್ಟಲು ಮಾಡುವ ಕ್ರಮಬದ್ಧ ರೋಗನಿದಾನ ಮತ್ತು ಚಿಕಿತ್ಸೆ; ಮತ್ತು ಇದು ಆಕ್ಯುಪಂಕ್ಚರ್ ಮತ್ತು [3][ಆಕ್ಯುಪ್ರೆಷರ್ ಚಿಕಿತ್ಸೆಗಳನ್ನು ಹಾಗೂ ನಿಯಮಿಸಬಹುದಾದ ಯಾವುದೇ ಇತರ ಚಿಕಿತ್ಸಾ ವಿಧಾನವನ್ನು ಒಳಗೊಳ್ಳುತ್ತದೆ][3]

(ಎಂ) "ನರ್ಸಿಂಗ್ ಹೋಂ" ಎಂದರೆ, ಅಸ್ವಸ್ಥತೆಯಿಂದ, ಗಾಯದಿಂದ ಅಥವಾ (ದೈಹಿಕ ಅಥವಾ ಮಾನಸಿಕ) ಅಶಕ್ತತೆಯಿಂದ ಬಳಲುತ್ತಿರುವ ರೋಗಿಗಳನ್ನು ರೋಗಗಳ ಅಥವಾ ಅಶಕ್ತತೆಯ ಚಿಕಿತ್ಸೆಯ ಅಥವಾ ಆರೋಗ್ಯವನ್ನು ಸುಧಾರಿಸಿಕೊಳ್ಳುವ ಉದ್ದೇಶದಿಂದ ಅಥವಾ ವಿಶ್ರಾಂತಿಯ ಉದ್ದೇಶಕ್ಕಾಗಿ ಅಥವಾ ಈ ಪ್ರಕರಣದ (ಎಲ್) ಖಂಡದಲ್ಲಿ ಹೇಳಲಾಗಿರುವ ಉದ್ದೇಶಗಳಿಗೆ ಅನುರೂಪವಾದ ಅಥವಾ ಅನುರೂಪವಾಗಿರದ ಉದ್ದೇಶಕ್ಕಾಗಿ ಅಥವಾ ಇನ್ನಾವುದಾದರೂ ಉದ್ದೇಶಕ್ಕಾಗಿ ಸಾಮಾನ್ಯವಾಗಿ ವ್ಯಕ್ತಿಗಳನ್ನು ಬರಮಾಡಿಕೊಳ್ಳುವ ಅಥವಾ ದಾಖಲುಮಾಡಿಕೊಳ್ಳುವ ಒಂದು ಸಂಸ್ಥೆ;

[2][‘(ಎಂ-1) “ರೋಗಿಯ ಚಾರ್ಟರ್ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರ್” ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ರೋಗಿಯ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಹಕ್ಕುಗಳು ಮತ್ತು ಜವಾಬ್ದಾರಿಗಳು;][2]

[2][(ಎಂ-2) “ನಿಯಮಿಸಲಾದುದು” ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ಮಾಡಲಾದ ನಿಯಮಗಳ ಮೂಲಕ ನಿಯಮಿಸಲಾದುದು.][2]

(ಎನ್) "ಖಾಸಗಿ ವೈದ್ಯಕೀಯ ಸಂಸ್ಥೆ" ಎಂದರೆ, ಹಾಸಿಗೆಗಳುಳ್ಳ ಅಥವಾ ಹಾಸಿಗೆಗಳಿಲ್ಲದಿರುವ ಆಸ್ಪತ್ರೆ ಅಥವಾ ದವಾಖಾನೆ, ನರ್ಸಿಂಗ್ ಹೋಂ, ಚಿಕಿತ್ಸಾ ಪ್ರಯೋಗಾಲಯ, ರೋಗನಿದಾನ ಕೇಂದ್ರ, ಪ್ರಸೂತಿ ಗೃಹ, ರಕ್ತನಿಧಿ, ಕ್ಷಕಿರಣ ಪರೀಕ್ಷಾ ಕೇಂದ್ರ, ಸ್ಕ್ಯಾನಿಂಗ್ ಕೇಂದ್ರ, ಫಿಸಿಯೋಥರಪಿ ಕೇಂದ್ರ, ಚಿಕಿತ್ಸಾಲಯ, ಪಾಲಿಕ್ಲಿನಿಕ್, [2][ಡೆಂಟಲ್ ಕ್ಲಿನಿಕ್ ಅಥವಾ ಡೆಂಟಲ್ ಪಾಲಿಕ್ಲಿನಿಕ್,][2] ವೈದ್ಯಸಲಹಾ ಕೇಂದ್ರ (Consultation centre) ಮತ್ತು ಸಾರ್ವಜನಿಕರಿಗೆ ರೋಗ ತಪಾಸಣೆ, ರೋಗ ನಿದಾನ, ರೋಗ ತಡೆಗಟ್ಟುವಿಕೆ ಅಥವಾ ರೋಗಗುಣಪಡಿಸುವ ಅಥವಾ ಮರು ಚೇತರಿಕೆ ಸ್ಥಾಪಿಸುವ (rehabilitative) ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ [2][,ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚಿಸಬಹುದಾದ,][2] ಯಾವುದೇ ಹೆಸರಿನಿಂದ ಕರೆಯಬಹುದಾದಂಥ ಇತರ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಅಥವಾ ಖಾಸಗಿ ಸಂಸ್ಥೆಗಳನ್ನು ಒಳಗೊಳ್ಳುತ್ತದೆ ಆದರೆ,-

(i) ರಾಜ್ಯ ಸರ್ಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಇತರ ಶಾಸನಬದ್ಧ ನಿಕಾಯ;

(ii) ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಸಾರ್ವಜನಿಕ ವಲಯ ಉದ್ಯಮಗಳು;

(iii) ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ಒಡೆತನ ಅಥವಾ ನಿಯಂತ್ರಣದಲ್ಲಿರುವ ಸ್ವಾಯತ್ತ ಸಂಸ್ಥೆಗಳು;

(iv) ರಾಜ್ಯ ಅಥವಾ ಕೇಂದ್ರ ಅಥವಾ ಈ ಎರಡೂ ಸರ್ಕಾರಗಳು ಶೇಕಡಾ ಐವತ್ತಕ್ಕಿಂತ ಹೆಚ್ಚಿನ ಷೇರುಗಳನ್ನು ಹೊಂದಿರುವ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿ ನೋಂದಾಯಿತವಾದ ಸಹಕಾರ ಸಂಘ;

(v) ರಾಜ್ಯ ಅಥವಾ ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ರಡಿ ನೋಂದಣಿಯಾದ ಸಂಘ;

(vi) ರಾಜ್ಯ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದ ಅಥವಾ ಮೇಲ್ವಿಚಾರಣೆಯಲ್ಲಿರುವ ಒಂದು ನ್ಯಾಸ,

– ಇವುಗಳು ನಡೆಸುತ್ತಿರುವ ಅಥವಾ ನಿರ್ವಹಿಸುತ್ತಿರುವ ಅಥವಾ ಪ್ರಾಯೋಜಿಸುತ್ತಿರುವ ವೈದ್ಯಕೀಯ ಸಂಸ್ಥೆಗಳನ್ನು ಒಳಗೊಳ್ಳುವುದಿಲ್ಲ.

(ಒ) "ಫಿಸಿಯೋಥೆರಪಿ ಸಂಸ್ಥೆ" ಯು ರೋಗಗಳ ಅಥವಾ ಅಶಕ್ತತೆ ಚಿಕಿತ್ಸೆ ಅಥವಾ ಆರೋಗ್ಯ ಸುಧಾರಣೆಯ ಉದ್ದೇಶಕ್ಕಾಗಿ ಅಥವಾ ವಿಶ್ರಾಂತಿಯ ಉದ್ದೇಶಗಳಿಗಾಗಿ ಅಥವಾ ಈ ಪ್ರಕರಣದ (ಎಲ್) ಖಂಡದಲ್ಲಿ ಹೇಳಲಾದ ಉದ್ದೇಶಗಳಿಗೆ ಅನುರೂಪವಾಗಿರುವ ಅಥವಾ ಅನುರೂಪವಾಗಿರದ ಯಾವುದಾದರೂ ಇತರ ಉದ್ದೇಶಕ್ಕಾಗಿ ಮಾಲೀಷುಮಾಡುವ, ಜಲಚಿಕಿತ್ಸೆಯ, ಚಿಕಿತ್ಸಾ ವ್ಯಾಯಾಮದ (remedial Gynnastics) ಅಥವಾ ಸಾಮಾನ್ಯವಾಗಿ ಅಂಥದೇ ಕೆಲಸವನ್ನು ನಡೆಸುವ ಸಂಸ್ಥೆಗಳನ್ನು ಒಳಗೊಳ್ಳುತ್ತವೆ.

(ಪಿ) "ಸಾರ್ವಜನಿಕ ಪ್ರಾಧಿಕಾರ" ಎಂದರೆ, ಯಾವುದೇ ಕಾನೂನಿನ್ವಯ ಅಥವಾ ಅದರಡಿಯಲ್ಲಿ ರಚಿಸಲಾದ ಒಂದು ಪ್ರಾಧಿಕಾರ;

(ಕ್ಯೂ) "ನೋಂದಣಿ" ಎಂದರೆ 7ನೇ ಪ್ರಕರಣದಲ್ಲಿ ನೀಡಲಾದ ನೋಂದಣಿ;

(ಆರ್) [2][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][2] ಎಂದರೆ 4ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ [2][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][2].

[1][(ಎಸ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಾದ ಅನುಸೂಚಿ.][1]

1. 2010ರ ಅಧಿನಿಯಮ ಸಂಖ್ಯೆ 33ರ ಮೂಲಕ ದಿನಾಂಕ: 27.07.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ:04.04.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**3. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ.–** ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ ಈ ಅಧಿನಿಯಮದ ಅಡಿಯಲ್ಲಿ ಮಂಜೂರಾದ ನೋಂದಣಿಯ ನಿಬಂಧನೆಗಳು ಹಾಗೂ ಷರತ್ತುಗಳಿಗೆ ಅನುಸಾರವಾಗಿ ಹೊರತು ರಾಜ್ಯದಲ್ಲಿ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸತಕ್ಕದ್ದಲ್ಲ, ನಡೆಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳು [2][[1][ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2012ರ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳೊಳಗೆ][1]][2] ಅಂಥ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು [3][ಹಾಗೂ ಈ ಅಧಿನಿಯಮದ ಉಪಬಂಧಗಳನ್ನು ಅನುಸರಿಸತಕ್ಕದ್ದು][3] ಮತ್ತು ಅದರ ಮೇಲೆ ಆದೇಶ ಮಾಡುವವರೆಗೂ ಅರ್ಜಿಯನ್ನು ವಿಲೆಮಾಡುವವರೆಗೆ ಅದನ್ನು ನಡೆಸಬಹುದು ಅಥವಾ ನಿರ್ವಹಿಸಿಕೊಂಡು ಬರಬಹುದು.

1. 2010ರ ಅಧಿನಿಯಮ ಸಂಖ್ಯೆ 33ರ ಮೂಲಕ ದಿನಾಂಕ: 27.07.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2012ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 03.09.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ:04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][4. **ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ.–** ಪ್ರತಿಯೊಂದು ಜಿಲ್ಲೆಯಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅರ್ಹತೆಯನ್ನು ಹೊಂದಿರುವ, ಈ ಮುಂದಿನ ನಾಮ ನಿರ್ದೇಶಿತ ಸದಸ್ಯರನ್ನು ಒಳಗೊಂಡ ಒಂದು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಇರತಕ್ಕದ್ದು, ಎಂದರೆ:–

| | | |
|---|---|---|
| (ಎ) | ಜಿಲ್ಲೆಯ ಜಿಲ್ಲಾಧಿಕಾರಿ | ಅಧ್ಯಕ್ಷರು |
| (ಬಿ) | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| (ಸಿ) | ಜಿಲ್ಲಾ ಆಯುಷ್ ಅಧಿಕಾರಿ | ಸದಸ್ಯ |
| (ಡಿ) | ಭಾರತೀಯ ವೈದ್ಯಕೀಯ ಸಂಘದಿಂದ ಮತ್ತು ಇನ್ನೊಂದು ಇತರ ಸಂಘದಿಂದ, ಪ್ರತಿಯೊಂದರಿಂದಲೂ ಒಬ್ಬೊಬ್ಬ ಸದಸ್ಯರು | ಸದಸ್ಯರು |
| (ಇ) | ಪ್ರಾಧಿಕಾರವು ಕುಂದುಕೊರತೆ ನಿವಾರಣಾ ಕಾರ್ಯವನ್ನು ನಿರ್ವಹಿಸುವಾಗ ಒಬ್ಬ ಮಹಿಳಾ ಪ್ರತಿನಿಧಿ | ಸದಸ್ಯರು |

][1]

[2][ಪರಂತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ಸಂದರ್ಭದಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| **(ಎ)** | **ಆಯುಕ್ತರು, ಬಿಬಿಎಂಪಿ** | **ಚೇರ್ಮನ್** |
| **(ಬಿ)** | **ಮುಖ್ಯ ಆರೋಗ್ಯ ಅಧಿಕಾರಿ (ಸಾರ್ವಜನಿಕ ಆರೋಗ್ಯ)** | **ಸದಸ್ಯರು** |
| **(ಸಿ)** | **ಅಧ್ಯಕ್ಷ ಅಥವಾ ಕಾರ್ಯದರ್ಶಿ, ಭಾರತೀಯ ವೈದ್ಯಕೀಯ ಸಂಘ, ರಾಜ್ಯ ಕೇಂದ್ರ ಕಾರ್ಯಸ್ಥಾನಗಳು** | **ಸದಸ್ಯರು** |
| **(ಡಿ)** | **ಜಂಟಿ ನಿರ್ದೇಶಕರು, ಆಯುಷ್** | **ಸದಸ್ಯರು** |
| **(ಇ)** | **ಕುಂದುಕೊರತೆ ನಿವಾರಣಾದೊಂದಿಗೆ ಪ್ರಾಧಿಕಾರವು ವ್ಯವಹರಿಸುವಾಗ ಒಬ್ಬರು ಮಹಿಳಾ ಪ್ರತಿನಿಧಿ** | **ಸದಸ್ಯರು** |

ಮತ್ತು ಪರಂತು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ, 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಬಾಕಿಯಿರುವ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು, ಮೊದಲ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅದು, ಅವುಗಳು ತನ್ನ ಮುಂದೆ ದಾಖಲಾಗಿದ್ದಲ್ಲಿ ಹೇಗೋ ಹಾಗೆ ಅವುಗಳನ್ನು ವಿಲೆ ಮಾಡತಕ್ಕದ್ದು.][2]

1. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 33ರ ಮೂಲಕ ದಿನಾಂಕ: 31.07.2020 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

5. **ನೋಂದಣಿಗಾಗಿ ಅರ್ಜಿ.–** (1) ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರೆಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಸಂಬಂಧಿಸಿದ [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ ಹಾಗೂ ಅಂಥ

ಶುಲ್ಕದೊಡನೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.

1. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಪೂರ್ವ ಅಗತ್ಯತೆಗಳು.–** [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ವು ನೋಂದಣಿಯನ್ನು ಮಂಜೂರುಮಾಡುವ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಇರುವ ಈ ಮುಂದಿನ ಪೂರ್ವ ಅಗತ್ಯತೆಗಳನ್ನು ಪೂರೈಸಲಾಗಿದೆಯೇ ಎಂಬುದನ್ನು ಪರಿಗಣಿಸತಕ್ಕದ್ದು, ಎಂದರೆ:–

(i) ಖಾಸಗಿ ವೈದ್ಯಕೀಯ ಸಂಸ್ಥೆಯು ಆರೋಗ್ಯಕರ ಪರಿಸರದಲ್ಲಿ ಇದೆ ಮತ್ತು ಅದು ಸ್ಥಾಪನೆಯಾದ ಅಥವಾ ಸ್ಥಾಪನೆಯಾಗಬೇಕಾದ ಉದ್ದೇಶಕ್ಕೆ ಸೂಕ್ತವಾಗಿದೆ;

(ii) ಖಾಸಗಿ ವೈದ್ಯಕೀಯ ಸಂಸ್ಥೆಯು ವಿದ್ಯಾರ್ಹತೆಯುಳ್ಳ ವೈದ್ಯರನ್ನು, ವಿದ್ಯಾರ್ಹತೆಯುಳ್ಳ ಮತ್ತು ತರಬೇತಿ ಹೊಂದಿದ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಹೊಂದಿದೆ;

(iii) ಖಾಸಗಿ ವೈದ್ಯಕೀಯ ಸಂಸ್ಥೆಯು ತನ್ನ ವಿವಿಧ ಪ್ರಕಾರ್ಯಗಳನ್ನು ನಡೆಸಲು, ಸಾಧನೆ ಸಲಕರಣೆಗಳು ಹಾಗೂ ಇತರ ಮೂಲ ಸೌಕರ್ಯಗಳಿಗಾಗಿ ಅವಶ್ಯಕವಾದ ಕಟ್ಟಡಗಳನ್ನು ಹೊಂದಿದೆ;

(iv) ಖಾಸಗಿ ವೈದ್ಯಕೀಯ ಸಂಸ್ಥೆಯು 9ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಮಾನಕ ಗುಣಮಟ್ಟಗಳಿಗೆ ಅನುಗುಣವಾಗಿದೆ;

(v) ನಿಯಮಿಸಬಹುದಾದ ಅಂಥ ಇತರ ಅಂಶಗಳು.

[2][ಪರಂತು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ, ಸರ್ಕಾರಿ ಆಸ್ಪತ್ರೆಯಿಂದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ನಿಕಾಯಗಳು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಸೊಸೈಟಿ ಅಥವಾ ನ್ಯಾಸ ಅಥವಾ ಸ್ವಾಯತ್ತ ಸಂಸ್ಥೆಯಿಂದ ಪ್ರವರ್ತಿಸಲಾದ ಅಥವಾ ನಿರ್ವಹಿಸಲಾದ ಆಸ್ಪತ್ರೆಯಿಂದ 200 ಮೀಟರುಗಳ ದೂರದ ಒಳಗೆ ಯಾವುದೇ ಹೊಸ ಖಾಸಗಿ ಚಿಕಿತ್ಸಾ ಪ್ರಯೋಗಾಲಯಕ್ಕೆ ಅನುಮತಿಯನ್ನು ನೀಡತಕ್ಕದ್ದಲ್ಲ.][2]

1. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ:04.04.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ
2. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ:04.04.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**7. ಅರ್ಜಿಗಳ ವಿಲೆ.–**[1][(1) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 5ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಎಲ್ಲಾ ರೀತಿಯಲ್ಲಿಯೂ ಪರಿಪೂರ್ಣವಾದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ, 6ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಅವಶ್ಯಕವಾಗಬಹುದಾದ ಅಂಥ ವಿಚಾರಣೆಯನ್ನು ಪರಿಶೀಲನಾ ಸಮಿತಿಯ ಮೂಲಕ ನಡೆಸಿದ ತರುವಾಯ, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ನೋಂದಣಿಯನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ತೊಂಭತ್ತು ದಿನಗಳಿಗೂ ಮೀರಿದ ಯಾವುದೇ ವಿಳಂಬದ ಸಂದರ್ಭದಲ್ಲಿ ನೋಂದಣಿಯನ್ನು ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.][1]

(2) (1)ನೇ ಉಪಪ್ರಕರಣದಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಕೂಡಲೇ ಅರ್ಜಿದಾರನಿಗೆ ತಿಳಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಿದ ಪ್ರತಿಯೊಂದು ನೋಂದಣಿಯು ಐದು ವರ್ಷಗಳ ಅವಧಿಯ ವರೆಗೆ ಸಿಂಧುತ್ವವನ್ನು ಹೊಂದಿರುತ್ತದೆ ಮತ್ತು

ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಿದ ಮೇಲೆ ಒಂದು ಬಾರಿಗೆ ಐದು ವರ್ಷಗಳ ವರೆಗೆ ನವೀಕರಿಸಬಹುದು.

[2][(4) (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ನೋಂದಣಿ ಮತ್ತು ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ಸದಸ್ಯರನ್ನು ಒಳಗೊಂಡ ಒಂದು ಪರಿಶೀಲನಾ ಸಮಿತಿಯನ್ನು ರಚಿಸಬಹುದು.

(5) ನೋಂದಣಿಯ ನವೀಕರಣಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಎಲ್ಲಾ ರೀತಿಯಲ್ಲೂ ಪರಿಪೂರ್ಣ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 6ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು (4)ನೇ ಉಪಪ್ರಕರಣದ ಅಡಿಯಲ್ಲಿ ರಚನೆಯಾದ ಪರಿಶೀಲನಾ ಸಮಿತಿಯ ಮೂಲಕ, ಅವಶ್ಯಕವಾಗಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ನವೀಕರಣವನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು; ತೊಂಭತ್ತು ದಿನಗಳಿಗೂ ಮೀರಿದ ಯಾವುದೇ ವಿಳಂಬದ ಸಂದರ್ಭದಲ್ಲಿ ನವೀಕರಣವನ್ನು ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(6) ನೋಂದಣಿ ಮತ್ತು ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರವು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದ ಹೊರತು ಮತ್ತು ಅಂಥ ತಿರಸ್ಕರಣೆಗೆ ಕಾರಣಗಳನ್ನು ದಾಖಲಿಸದ ಹೊರತು, ನೋಂದಣಿ ಅಥವಾ ನವೀಕರಣದ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(7) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ತಾನಾಗಿಯೇ ಆಗಲಿ ಅಥವಾ ಯಾವುದೇ ಲಿಖಿತ ದೂರಿನ ಆಧಾರದ ಮೇಲೆಯಾಗಲಿ, ನೋಂದಣಿಯ ಷರತ್ತುಗಳನ್ನು ಮುಕ್ತವಾಗಿ ಪಾಲಿಸಲಾಗಿದೆಯೇ ಮತ್ತು ಅನುಸರಿಸಲಾಗಿದೆಯೇ ಎಂಬುದನ್ನು ತಾನು ಮನದಟ್ಟು ಮಾಡಿಕೊಳ್ಳಲು ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸೂಕ್ತ ಸಮಯದಲ್ಲಿ ತಪಾಸಣೆ ನಡೆಸುವಂತೆ ಮಾಡಬಹುದು ಅಥವಾ (4)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ಪರಿಶೀಲನಾ ಸಮಿತಿಯು ತಪಾಸಣೆ ನಡೆಸಲು ನಿರ್ದೇಶಿಸಬಹುದು.

(8) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ, ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿಯ ಷರತ್ತುಗಳ ಅನುಸಾರವಾಗಿ ನಡೆಸಲಾಗುತ್ತಿಲ್ಲ ಎಂದು ಕಂಡುಬಂದ ಸಂದರ್ಭದಲ್ಲಿ, ಅದನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸೂಕ್ತ ಸಮಯದೊಳಗೆ ಪರಿಹರಿಸುವಂತೆ ಸಂಸ್ಥೆಗೆ ಪ್ರಾಧಿಕಾರವು ನಿರ್ದೇಶಿಸತಕ್ಕದ್ದು.][2]

1. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**8. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಪ್ರಕಾರ್ಯಗಳು.–** (1) ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರನ್ನು ಅನುಸರಣೆ ಮಾಡದೇ ಇರುವ ಕುರಿತು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ದೂರನ್ನು ಸ್ವೀಕರಿಸಿದಾಗ, ದೂರಿನ ಕುರಿತು ವಿಚಾರಣೆ ನಡೆಸತಕ್ಕದ್ದು:

ಪರಂತು, ಚಿಕಿತ್ಸೆಗಳು, ಚಿಕಿತ್ಸಾ ವಿಧಾನ ಮತ್ತು ಲಿಖಿತ ಸೂಚಿ ಪರಿಶೋಧನೆಗಳಿಗಾಗಿ ಇರುವ ವಿಧ್ಯುಕ್ತ ಮಾನದಂಡಗಳ ನಿರ್ಲಕ್ಷ್ಯ, ಪಾಲಿಸದೇ ಇರುವುದಕ್ಕೆ ಸಂಬಂಧಿಸಿದ ದೂರುಗಳನ್ನು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದು ಮತ್ತು ಅರವತ್ತು ದಿನಗಳೊಳಗೆ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.

(2) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ಯಾವುದೇ ವಿಷಯದ ತನಿಖೆಯನ್ನು ಅಥವಾ ವಿಚಾರಣೆಯನ್ನು ಮಾಡುವಾಗ, ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುತ್ತಿರುವ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಯಾವೊಬ್ಬ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಹಾಗೂ ಆತನನ್ನು ಪ್ರಮಾಣೀಕರಿಸುವ ಮೂಲಕ ಪರೀಕ್ಷಿಸುವುದು;

(ii) ಯಾವುವೇ ದಸ್ತಾವೇಜುಗಳನ್ನು ಮತ್ತು ಸಾಕ್ಷಿದಾರರನ್ನು ಹುಡುಕುವುದು ಮತ್ತು ಹಾಜರುಪಡಿಸುವುದು;

(iii) ಅಫಿಡಾವಿತ್ತುಗಳ ಮೇಲೆ ಯಾವುದೇ ಸಾಕ್ಷ್ಯವನ್ನು ಸ್ವೀಕರಿಸುವುದು;

(iv) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(v) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಬಾಧಿತ ವ್ಯಕ್ತಿ ಮತ್ತು ಇತರ ಪಕ್ಷಕಾರನನ್ನು ಕುಂದುಕೊರತೆಯ ನಿವಾರಣೆಗಾಗಿ ಆಲಿಸತಕ್ಕದ್ದು ಹಾಗೂ ದೂರನ್ನು ಸಂಕ್ಷಿಪ್ತ ಅಧಿವಿಚಾರಣೆಯ ಮೂಲಕ, ದೂರಿನ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ವಿಲೆ ಮಾಡತಕ್ಕದ್ದು.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**9. ಗುಣಮಟ್ಟಗಳು.–** (1) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಿಬ್ಬಂದಿ ಮತ್ತು ಅವರ ವಿದ್ಯಾರ್ಹತೆಗಳು, ಶಸ್ತ್ರಚಿಕಿತ್ಸೆ ಕೊಠಡಿ, ಕಟ್ಟಡಗಳು, ಅವಶ್ಯಕ ಸ್ಥಳಾವಕಾಶ, ಸಲಕರಣೆಗಳು, ರೋಗಿಗಳಿಗೆ ಮತ್ತು ಅವರನ್ನು ನೋಡಿಕೊಳ್ಳುವವರಿಗೆ ಒದಗಿಸಬೇಕಾದ ಸೌಲಭ್ಯಗಳು ನಿರ್ವಹಣೆ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಅಥವಾ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ನಿಗದಿಪಡಿಸಲಾದ [1][ಸಿಬ್ಬಂದಿಯ ಮಾದರಿ (staffing pattern) ಮತ್ತು ಮೂಲಸೌಕರ್ಯ ಇತ್ಯಾದಿಗಳ][1] ಗುಣಮಟ್ಟಗಳನ್ನು ಪಾಲಿಸಿಕೊಂಡು ಬರತಕ್ಕದ್ದು.

(2) ರಾಜ್ಯಸರ್ಕಾರವು ನಿರ್ಧರಿಸಿದಂತೆ ಬೇರೆ ಬೇರೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಬೇರೆ ಬೇರೆ ಗುಣಮಟ್ಟಗಳನ್ನು ನಿಗದಿಪಡಿಸಬಹುದು. ಬೇರೆ ಬೇರೆ ಪ್ರದೇಶಗಳಿಗೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿವಿಧ ವರ್ಗ ಅಥವಾ ವರ್ಗಗಳಿಗೆ ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಗುಣಮಟ್ಟಗಳನ್ನು ಸೂಚಿಸಲು ರಾಜ್ಯ ಸರ್ಕಾರವು ತಜ್ಞರ ಸಮಿತಿಗಳನ್ನು ರಚಿಸಬಹುದು. ತಜ್ಞರ ಸಮಿತಿಗಳ ಸಂಯೋಜನೆ, ಅಧಿಕಾರಗಳು ಮತ್ತು ಜವಾಬ್ದಾರಿಗಳು ಮತ್ತು ತಜ್ಞರ ಸಮಿತಿಯ ಸದಸ್ಯರುಗಳ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

[1][ಪರಂತು, ಖಾಸಗಿ ವೈದ್ಯಕೀಯ ಸಂಸ್ಥೆಗಳ ಪ್ರತಿನಿಧಿಗಳ ಸಂಖ್ಯೆಯು ಒಟ್ಟು ಸದಸ್ಯರ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1]**[9ಎ. ತಜ್ಞರ ಸಮಿತಿಗಳು ಮತ್ತು ಇತರ ಸಮಿತಿಗಳ ಪ್ರಕಾರ್ಯಗಳು.–** (1) 9ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ತಜ್ಞರ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು, ಎಂದರೆ:–

(ಎ) (ಬಿ) ಖಂಡದ ಉದ್ದೇಶಕ್ಕಾಗಿ ವಸ್ತುನಿಷ್ಠ ಆಧಾರದ ಮೇಲೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗೀಕರಣದ ಸಂಬಂಧದಲ್ಲಿ ಅಧ್ಯಯನ ಮಾಡುವುದು ಮತ್ತು ಶಿಫಾರಸ್ಸು ಮಾಡುವುದು;

(ಬಿ) ಮೂಲಸೌಲಭ್ಯಗಳು, ಸಿಬ್ಬಂದಿಯ ಮಾದರಿ ಮತ್ತು ಸಿಬ್ಬಂದಿಯ ವಿದ್ಯಾರ್ಹತೆಗಳ ಕನಿಷ್ಠ ಮಾನದಂಡಗಳನ್ನು ಶಿಫಾರಸ್ಸು ಮಾಡುವುದು;

(ಸಿ) ಚಿಕಿತ್ಸೆಗಳು ಮತ್ತು ಚಿಕಿತ್ಸಾ ವಿಧಾನಗಳಿಗಾಗಿ ಹಾಗೂ ಲಿಖಿತಸೂಚಿ ಪರಿಶೋಧನೆಗಾಗಿ (Prescription Audit) ವಿಧ್ಯುಕ್ತ ನಿರೂಪಣೆಗಳ (Protocols) ಮಾನದಂಡಗಳನ್ನು ಶಿಫಾರಸ್ಸು ಮಾಡುವುದು;

(ಡಿ) ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಸರ್ಕಾರದ ಯಾವುದೇ ಆರೋಗ್ಯ ಪಾಲನೆ ಭರವಸೆ ಸ್ಕೀಮಿನ ಅಡಿಯಲ್ಲಿ ಒಳಗೊಳ್ಳುವ ಪ್ರತಿಯೊಂದು ಚಿಕಿತ್ಸಾ ವಿಧಾನ ಮತ್ತು ಚಿಕಿತ್ಸೆಗೆ ಏಕರೂಪ ಪ್ಯಾಕೇಜ್ ದರಗಳನ್ನು ನಿಗದಿಪಡಿಸಲು ಶಿಫಾರಸ್ಸು ಮಾಡುವುದು; ಮತ್ತು

(ಇ) ರಾಜ್ಯ ಸರ್ಕಾರವು ನಿಯಮಿಸಬಹುದಾದ ಯಾವುದೇ ಇತರ ಪ್ರಕಾರ್ಯಗಳು.

(2) ರಾಜ್ಯ ಸರ್ಕಾರವು, ತಜ್ಞರ ಸಮಿತಿಯ ಶಿಫಾರಸ್ಸಿನ ಮೇಲೆ, ಮತ್ತು ಪೂರ್ವ ಪ್ರಕಟಣೆಯ ತರುವಾಯ, ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸುವುದು ಮತ್ತು ಅದನ್ನು ಪರಿಗಣಿಸಿದ ತರುವಾಯ ಈ ಮುಂದಿನವುಗಳನ್ನು ನಿಗದಿಪಡಿಸತಕ್ಕದ್ದು ಹಾಗೂ ಅಧಿಸೂಚಿಸತಕ್ಕದ್ದು, ಎಂದರೆ:–

(ಎ) ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗೀಕರಣ;

(ಬಿ) ಮೂಲ ಸೌಲಭ್ಯ, ಸಿಬ್ಬಂದಿಯ ಮಾದರಿ ಮತ್ತು ಸಿಬ್ಬಂದಿಗಳ ವಿದ್ಯಾರ್ಹತೆ ಇವುಗಳ ಕನಿಷ್ಠ ಮಾನದಂಡಗಳು;

(ಸಿ) ಚಿಕಿತ್ಸೆಗಳು ಮತ್ತು ಚಿಕಿತ್ಸಾ ವಿಧಾನಗಳಿಗಾಗಿ ಹಾಗೂ ಲಿಖಿತಸೂಚಿ ಪರಿಶೋಧನೆಗಾಗಿ (Prescription Audit) ವಿಧ್ಯುಕ್ತ ನಿರೂಪಣೆಗಳ ಮಾನದಂಡಗಳು;

(ಡಿ) ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಸರ್ಕಾರದ ಯಾವುದೇ ಆರೋಗ್ಯ ಪಾಲನೆ ಭರವಸೆ ಸ್ಕೀಮಿನ ಅಡಿಯಲ್ಲಿ ಒಳಗೊಳ್ಳುವ ಪ್ರತಿಯೊಂದು ಚಿಕಿತ್ಸಾ ವಿಧಾನ ಮತ್ತು ಚಿಕಿತ್ಸೆಗೆ ಏಕರೂಪ ಪ್ಯಾಕೇಜ್ ದರಗಳು.

(3) ಇತರ ಅಡ್–ಹಾಕ್ ಸಮಿತಿಗಳು.– (ಎ) ರಾಜ್ಯ ಸರ್ಕಾರವು, ನಿಯಮಿಸಬಹುದಾದ ಅಂಥ ಸಂಖ್ಯೆಯ ಸದಸ್ಯರೊಂದಿಗೆ ಅಂಥ ಸಂಖ್ಯೆಯ ಅಡ್–ಹಾಕ್ ಸಮಿತಿಗಳನ್ನೂ ಸಹ ರಚಿಸಬಹುದು;

(ಬಿ) ನಿಯಮಿಸಬಹುದಾದ ಅಂಥ ಕಾರ್ಯವನ್ನು ಅಡ್–ಹಾಕ್ ಸಮಿತಿಯು ನಿರ್ವಹಿಸತಕ್ಕದ್ದು ಮತ್ತು ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ, ಅದರ ಪರಿಗಣನೆಗಾಗಿ ಸಲ್ಲಿಸತಕ್ಕದ್ದು.

(4) 9ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ತಜ್ಞರ ಸಮಿತಿಯು ಅಥವಾ ಈ ಉಪಪ್ರಕರಣದಲ್ಲಿ ರಚನೆಯಾದ ಅಡ್–ಹಾಕ್ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು; ಮತ್ತು

(5) ತಜ್ಞರ ಅಥವಾ ಅಡ್–ಹಾಕ್ ಸಮಿತಿಯ ಸರ್ಕಾರೇತರ ಸದಸ್ಯರು, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಅಥವಾ ಯಾವುದೇ ಇತರ ಭತ್ಯೆಗಳಿಗೆ ಅರ್ಹರಾಗಿರತಕ್ಕದ್ದು.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ:04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][10. **ಅಧಿಸೂಚಿಸಬೇಕಾದ ಚಾರ್ಜುಗಳ ಅನುಸೂಚಿ ಮತ್ತು ಸಂಸ್ಥೆಯ ವಿವರಗಳು.–** (1) ರೋಗಿಗಳ ಮತ್ತು ಸಾರ್ವಜನಿಕರ ಮಾಹಿತಿಗಾಗಿ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಮಾಲೋಚನಾ ಶುಲ್ಕ, ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಚಿಕಿತ್ಸಾ ವಿಧಾನ, ಆಸ್ಪತ್ರೆ ಚಾರ್ಜುಗಳು ಮತ್ತು ಇತರ ಸೇವೆಗಳಿಗೆ ಸಂಬಂಧಿಸಿದ ಚಾರ್ಜುಗಳ ಅನುಸೂಚಿಯನ್ನು ಹಾಗೂ ನಿಯಮಿಸಬಹುದಾದಂತೆ ಸಂಸ್ಥೆಯ ವಿವರಗಳನ್ನು ಈ ಕೆಳಗಿನಂತೆ ನಿರ್ದಿಷ್ಟಪಡಿಸಿದ ಪ್ರತಿಯೊಂದು ವಿಧಾನದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಲಭ್ಯವಾಗುವಂತೆ ಮಾಡತಕ್ಕದ್ದು, ಎಂದರೆ:–

ಸರ್ಕಾರವು ಒದಗಿಸುವ ಸಾರ್ವಜನಿಕ ಜಾಲತಾಣದಲ್ಲಿ ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸಂಸ್ಥೆಯ ಸ್ವಂತದ ಯಾವುದಾದರೂ ಜಾಲತಾಣವಿದ್ದಲ್ಲಿ, ಅದರಲ್ಲಿ, ಸಂಸ್ಥೆಯ ವಿವರಗಳು ಮತ್ತು ಚಾರ್ಜುಗಳ ಅನುಸೂಚಿಯನ್ನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸುವುದು;

ಸ್ವಾಗತ ಕೋಣೆಯನ್ನು ಎದ್ದುಕಾಣುವ ಸ್ಥಳದಲ್ಲಿ ಇರುವ ಸಂಸ್ಥೆಯ ಸೂಚನಾ ಫಲಕದಲ್ಲಿ ಸಮಾಲೋಚನಾ ಶುಲ್ಕವನ್ನು, ಪ್ರಮುಖ ಮತ್ತು ಬಹುತೇಕವಾಗಿ ಬಳಸಲಾಗುವ ತಪಾಸಣೆಗಳ, ಚಿಕಿತ್ಸೆ, ಚಿಕಿತ್ಸೆಗಳ ವಿಧಾನಗಳ, ಚಿಕಿತ್ಸೆಗಳ ಮತ್ತು ಇತರ ಸೇವೆಗಳ ದರಗಳನ್ನು ಹಾಗೂ ಆಸ್ಪತ್ರೆ ಚಾರ್ಜುಗಳನ್ನು ಪ್ರದರ್ಶಿಸುವುದು; ಮತ್ತು

ಎಲ್ಲಾ ಸಮಯದಲ್ಲೂ ಸಂಸ್ಥೆಯಲ್ಲಿ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಸಿದ್ಧ ರೂಪದಲ್ಲಿ ಲಭ್ಯವಾಗುವ ಪುಸ್ತಿಕೆಗಳ ಅಥವಾ ಕಿರು ಹೊತ್ತಿಗೆಗಳ ರೂಪದಲ್ಲಿ ಚಾರ್ಜುಗಳ ಅನುಸೂಚಿ:

ಪರಂತು, ಮೇಲೆ ವಿವರಿಸಿದ ವಿಧಾನಗಳ ಪ್ರಕಾರ ಅಧಿಸೂಚಿಸಿದ ಚಾರ್ಜುಗಳ ಅನುಸೂಚಿಯಲ್ಲಿ ಯಾವುದೇ ವ್ಯತ್ಯಾಸವಿದ್ದ ಸಂದರ್ಭವಿದ್ದಲ್ಲಿ, ಅತ್ಯಂತ ಕನಿಷ್ಠ ಮೊತ್ತವು ಪರಿಣಾಮಕಾರಿ ಎಂದು ಪರಿಗಣಿಸತಕ್ಕದ್ದು.

(2) ಒದಗಿಸಲಾದ ಸೇವೆಗಳಿಗೆ ಸಂಬಂಧಿಸಿದಂತೆ, ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯಿಂದ ಅಥವಾ ಆತನ ಸಂಬಂಧಿಯಿಂದ ಅಥವಾ ಸಂಗಡಿಗನಿಂದ (1)ನೇ ಉಪಪ್ರಕರಣಕ್ಕನುಗುಣವಾಗಿ ಅಧಿಸೂಚಿಸಲಾದ ಚಾರ್ಜುಗಳಿಗಿಂತ ಹೆಚ್ಚಿರದ ಮೊತ್ತವನ್ನು, ಬಾಬುವಾರು ಬಿಲ್ಲನ್ನು ಒದಗಿಸಿದ ನಂತರ ಸಂಗ್ರಹಿಸತಕ್ಕದ್ದು.

(3) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 20) ಅಡಿಯಲ್ಲಿ ಅರ್ಹ ಕುಟುಂಬಕ್ಕೆ ಸೇರಿದ ಮತ್ತು ಸರ್ಕಾರದ ಯಾವುದೇ ಆರೋಗ್ಯ ಭರವಸೆ ಸ್ಕೀಮುಗಳ ಅಡಿಯಲ್ಲಿ ಶಿಫಾರಸ್ಸು ಮಾಡಲಾದ ರೋಗಿಗೆ ಒದಗಿಸಿದ ಸೇವೆಗಳಿಗೆ, ರೋಗಿಯಿಂದ ಯಾವುದೇ ಚಾರ್ಜುಗಳನ್ನು ವಸೂಲು ಮಾಡತಕ್ಕದ್ದಲ್ಲ.

(4) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 20) ಅಡಿಯಲ್ಲಿ ಅರ್ಹ ಕುಟುಂಬಕ್ಕೆ ಸೇರದಿರುವ ಆದರೆ ಸರ್ಕಾರದ ಯಾವುದೇ ಆರೋಗ್ಯ ಭರವಸೆ ಸ್ಕೀಮುಗಳ ಅಡಿಯಲ್ಲಿ ಶಿಫಾರಸ್ಸು ಮಾಡಲಾದ ರೋಗಿಗೆ ಒದಗಿಸಿದ ಸೇವೆಗಳಿಗೆ, ಸ್ಕೀಮಿನ ಮಾನದಂಡಗಳಿಗೆ ಅನುಗುಣವಾಗಿ ಸರ್ಕಾರದಿಂದ ಮರುಭರ್ತಿಯಾಗಬಹುದಾದ ಮೊತ್ತಕ್ಕೆ ಮೀರಿದ ಮೊತ್ತವನ್ನು, ಬಾಬುವಾರು ಬಿಲ್ಲನ್ನು ಒದಗಿಸಿದ ನಂತರ, (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ದರಗಳಿಗೆ ಒಳಪಟ್ಟು ವಸೂಲು ಮಾಡತಕ್ಕದ್ದು.

(5) (2)ನೇ ಅಥವಾ (3)ನೇ ಅಥವಾ (4)ನೇ ಉಪಪ್ರಕರಣದ ಅಡಿಯಲ್ಲಿ ಒಳಗೊಳ್ಳುವ ಯಾವೊಬ್ಬ ರೋಗಿಗೆ, 9ಎ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ನಿಯಮಿಸಲಾದ ವಿಧ್ಯುಕ್ತ ನಿರೂಪಣೆಗಳ ಮಾನದಂಡಕ್ಕೆ ಹೆಚ್ಚಾಗಿ ಅವಶ್ಯಕವಾಗಿರುವ ಯಾವುದೇ ತಪಾಸಣೆ ಅಥವಾ ಚಿಕಿತ್ಸೆ ಅಥವಾ ಚಿಕಿತ್ಸಾ ವಿಧಾನದ ಸಂದರ್ಭದಲ್ಲಿ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿ ಅಥವಾ ಆತನ ಪ್ರತಿನಿಧಿಗೆ ಅದರ ಅವಶ್ಯಕತೆಯನ್ನು ಕುರಿತು ವಿವರಿಸಿ ಮತ್ತು ಆತನ ಸಮ್ಮತಿಯನ್ನು ಪಡೆದುಕೊಂಡು ಹಾಗೂ ಅದನ್ನು ಕೈಗೊಂಡು, ಬಾಬುವಾರು ಬಿಲ್ಲನ್ನು ಒದಗಿಸಿದ ನಂತರ, (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ದರಗಳಿಗೆ ಒಳಪಟ್ಟು ಹೆಚ್ಚುವರಿ ಮೊತ್ತವನ್ನು ವಿಧಿಸಬಹುದು.

(6) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ರೋಗಿಯನ್ನು ದಾಖಲು ಮಾಡಿಕೊಳ್ಳುವ ಅವಧಿಯಲ್ಲಿ ಅಥವಾ ಚಿಕಿತ್ಸೆಯನ್ನು ಪ್ರಾರಂಭಿಸಿದ ನಂತರ, ರೋಗಿಗೆ ಅಥವಾ ರೋಗಿಯ ಸಂಗಡಿಗನಿಗೆ, ಚಿಕಿತ್ಸೆಗಾಗಿ ತಗಲುವ ವೆಚ್ಚದ ಸೂಕ್ತ ಅಂದಾಜನ್ನು ಮತ್ತು ಚಾರ್ಜುಗಳನ್ನು ಒದಗಿಸತಕ್ಕದ್ದು ಹಾಗೂ ಅಂತಿಮ ಬಿಲ್ಲು ಅಂದಾಜು ವೆಚ್ಚವನ್ನು ಮೀರತಕ್ಕದ್ದಲ್ಲ.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**11. ಖಾಸಗಿ ವೈದ್ಯಕೀಯ ಸಂಸ್ಥೆಗಳ ಅವಶ್ಯ ಕರ್ತವ್ಯಗಳು.–** ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ಸಂಸ್ಥೆಯ ಮುಂದೆ ತಾವಾಗಿಯೇ ಹಾಜರಾದ ಅಥವಾ ಯಾರಾದರೂ ಕರೆತಂದ ರಸ್ತೆ ಅಪಘಾತದ, ಆಕಸ್ಮಿಕ ಅಥವಾ ಉದ್ದೇಶ ಪೂರ್ವಕವಾಗಿ ಮಾಡಿದ ಸುಟ್ಟ ಗಾಯಗಳಾದ ಅಥವಾ ವಿಷ

ಸೇವನೆಯ ಅಥವಾ ಕ್ರಿಮಿನಲ್ ಹಲ್ಲೆ ಮುಂತಾದವುಗಳಿಗೆ ಒಳಗಾದ ನೊಂದ ವ್ಯಕ್ತಿಗಳಂಥ ಎಲ್ಲಾ ವೈದ್ಯಕೀಯ–ಕಾನೂನು ಅಥವಾ ಸಂಭವನೀಯ ವೈದ್ಯಕೀಯ–ಕಾನೂನು ಪ್ರಕರಣಗಳಲ್ಲಿ [2][ಅಂಥ ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ ಮುಂಗಡವನ್ನು ಪಾವತಿಸಲು ಒತ್ತಾಯಪಡಿಸದೆ][2] ಅವಶ್ಯ ಪ್ರಥಮ ಚಿಕಿತ್ಸೆ ನೀಡತಕ್ಕದ್ದು ಮತ್ತು ಇತರ ಪ್ರಾಣ ಉಳಿಸುವ, ದೇಹಸ್ಥಿತಿ ಸ್ಥಿರಗೊಳಿಸುವ ತುರ್ತು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(ii) ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ನಿರ್ದಿಷ್ಟಪಡಿಸಿದಂಥ ರೀತಿಯಲ್ಲಿ ಎಲ್ಲ ರಾಷ್ಟ್ರೀಯ ಮತ್ತು ರಾಜ್ಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸತಕ್ಕದ್ದು; ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅದರ ಬಗ್ಗೆ ನಿಯತಕಾಲಿಕ ವರದಿಗಳನ್ನು ಒದಗಿಸತಕ್ಕದ್ದು;

(iii) ಸೋಂಕು ರೋಗಗಳಿಗೆ ಸಂಬಂಧಿಸಿದಂತೆ ಇತರ ವ್ಯಕ್ತಿಗಳಿಗೆ ರೋಗ ಹರಡದಂತೆ ತಡೆಗಟ್ಟಲು ಶಾಸನಬದ್ಧ ಕರ್ತವ್ಯವನ್ನು ನಿರ್ವಹಿಸತಕ್ಕದ್ದು ಮತ್ತು ತಕ್ಷಣವೇ ಸಂಬಂಧಪಟ್ಟ ಸಾರ್ವಜನಿಕ ಆರೋಗ್ಯ ಪ್ರಾಧಿಕಾರಗಳಿಗೆ ಅದನ್ನು ವರದಿಮಾಡತಕ್ಕದ್ದು.

(iv) ರಾಜ್ಯಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಸೋಂಕು ರಹಿತ ರೋಗಗಳಿಗೆ ಸಂಬಂಧಿಸಿದ ವಿವರಗಳನ್ನು [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ಕ್ಕೆ ಒದಗಿಸತಕ್ಕದ್ದು.

[2][(v) ಸಾರ್ವಜನಿಕರಿಗೆ ಸುಲಭವಾಗಿ ಕಾಣುವ ಅಂಥ ಸ್ಥಳದಲ್ಲಿ ರೋಗಿಯ ಚಾರ್ಟರ್ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರನ್ನು ಪ್ರದರ್ಶಿಸತಕ್ಕದ್ದು;

(vi) ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ, ಬಾಕಿಗಳ ಪೂರ್ವ ಪಾವತಿಗೆ ಒತ್ತಾಯ ಮಾಡದೇ, ತಕ್ಷಣವೇ ಮೃತದೇಹವನ್ನು ಕೊಟ್ಟು ಬಿಡತಕ್ಕದ್ದು:

ಪರಂತು, ಯಾವುದೇ ಆರೋಗ್ಯ ರಕ್ಷಣಾ ಭರವಸೆ ಸ್ಕೀಮಿನ ಅಡಿಯಲ್ಲಿ ದಾಖಲಾದ ರೋಗಿಯ ಸಂದರ್ಭದಲ್ಲಿ, ಖಾಸಗಿ ವೈದ್ಯಕೀಯ ಸಂಸ್ಥೆಯು 9ಎ ಪ್ರಕರಣದ (2)ನೇ ಉಪಪ್ರಕರಣದ (ಡಿ) ಖಂಡಕ್ಕೆ ಅನುಸಾರವಾಗಿ ಸರ್ಕಾರದ ಸ್ಕೀಮಿನ ಮಾನದಂಡಗಳಿಗೆ ಅನುಗುಣವಾಗಿ ಮೊತ್ತವನ್ನು ಕ್ಲೇಮು ಮಾಡತಕ್ಕದ್ದು.

ಮತ್ತು ಪರಂತು, 10ನೇ ಪ್ರಕರಣದ (2)ನೇ ಉಪಪ್ರಕರಣದ ಅನುಸಾರವಾಗಿ ಬಾಕಿಯಿರುವ ಮೊತ್ತ ಅಥವಾ 10ನೇ ಪ್ರಕರಣದ (4)ನೇ ಅಥವಾ (5)ನೇ ಉಪಪ್ರಕರಣದ ಅನುಸಾರವಾಗಿ ಉಳಿದ ಬಾಕಿಯಿರುವ ಮೊತ್ತವನ್ನು ಕಾನೂನಿನ ಅನುಸಾರವಾಗಿ ಮುಂದಿನ ದಿನಗಳಲ್ಲಿ ಮೃತನ ಪ್ರತಿನಿಧಿಗಳಿಂದ ವಸೂಲಿ ಮಾಡಿಕೊಳ್ಳಬಹುದು.

(vii) ನಿಯಮಿಸಬಹುದಾದ ಅಂಥ ರೀತಿಯಲ್ಲಿ, ಖಾಸಗಿ ವೈದ್ಯಕೀಯ ಸಂಸ್ಥೆಯ ಹಂತದಲ್ಲಿ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯನ್ನು ಒದಗಿಸತಕ್ಕದ್ದು.][2]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**11ಎ. ರೋಗಿಯ ಚಾರ್ಟರ್ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರ್.–** (1) ಪ್ರತಿಯೊಬ್ಬ ರೋಗಿ ಅಥವಾ ಅಧಿಕೃತ ಕುಟುಂಬ ಸದಸ್ಯರು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯು, ಅಧಿನಿಯಮದ ಅನುಸೂಚಿಯಲ್ಲಿ ಒಳಗೊಂಡಿರುವಂತೆ, ರೋಗಿಯ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯ ಚಾರ್ಟರ್‌ನಲ್ಲಿ ನಿರ್ದಿಷ್ಟಪಡಿಸಿದ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

(2) ಪ್ರತಿಯೊಬ್ಬ ರೋಗಿ ಅಥವಾ ಅಧಿಕೃತ ಕುಟುಂಬದ ಸದಸ್ಯ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯು, (1)ನೇ ಉಪಪ್ರಕರಣದ ಉಪಬಂಧಗಳ ಅಥವಾ ಅಧಿನಿಯಮದ ಅಡಿಯಲ್ಲಿ ಮಾಡಲಾದ

ಯಾವುದೇ ನಿಯಮವನ್ನು ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದಂತೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ನಿಯಮಿಸಲಾದ ಅಂಥ ವಿಧಾನದಲ್ಲಿ ದೂರನ್ನು ನೀಡುವ ಹಕ್ಕನ್ನು ಹೊಂದಿರತಕ್ಕದ್ದು.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**11ಬಿ. ಅನುಸೂಚಿಯನ್ನು ತಿದ್ದುಪಡಿ ಮಾಡಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿನ ಯಾವುದೇ ನಮೂದುಗಳನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಬಿಟ್ಟುಬಿಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.][1]

(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**12. ಚಿಕಿತ್ಸಾ ದಾಖಲೆಗಳ ನಿರ್ವಹಣೆ.–** (1) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ತನ್ನ ರಕ್ಷಣೆಯಲ್ಲಿರುವ ರೋಗಿಗಳಿಗೆ ಸಂಬಂಧಿಸಿದಂತೆ ತನ್ನ ಕಾರ್ಯಚಟುವಟಿಕೆಗಳ ವೈದ್ಯಕೀಯ ದಾಖಲೆಗಳನ್ನು ನಿಯಮಿತ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ರಾಜ್ಯಸರ್ಕಾರದಿಂದ ಈ ಬಗ್ಗೆ ನಿರ್ದಿಷ್ಟ ಅಧಿಕಾರ ಪಡೆದ ಜಿಲ್ಲಾ ಸರ್ಜನ್ ಅಥವಾ ಇತರ ಅಧಿಕಾರಿಯು ತನ್ನ ಕರ್ತವ್ಯಗಳನ್ನು ಯುಕ್ತವಾಗಿ ನಿರ್ವಹಿಸುವಾಗ, ಎಲ್ಲ ಚಿಕಿತ್ಸಾ ದಾಖಲೆಗಳನ್ನು ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

(3) ಪ್ರತಿಯೊಬ್ಬ ವ್ಯಕ್ತಿಯು ಅಥವಾ ಅವನ ಕುಟುಂಬದ ಸದಸ್ಯನು ಯುಕ್ತ ವೆಚ್ಚಗಳನ್ನು ಪಾವತಿಸಿ ತನಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಯ ಪ್ರತಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

[1][ಪರಂತು, ಅಂಥ ಮಾಹಿತಿಯನ್ನು ಯಾವುದೇ ಇತರ ವ್ಯಕ್ತಿಗೆ ಬಹಿರಂಗಪಡಿಸತಕ್ಕದ್ದಲ್ಲ.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**13. ಮಾಹಿತಿಯನ್ನು ಪಡೆಯುವ ಪ್ರಕ್ರಿಯೆ.–** (1) ಪ್ರತಿಯೊಂದು ವೈದ್ಯಕೀಯ ಸಂಸ್ಥೆಯು, ಒಬ್ಬ ವ್ಯಕ್ತಿಯು ಭೇಟಿ ನೀಡಿದ ಅಥವಾ ದಾಖಲಾದ ಉದ್ದೇಶವು ಪೂರ್ಣಗೊಂಡ ತರುವಾಯ, ಆದಷ್ಟು ಬೇಗನೇ, ಆ ವ್ಯಕ್ತಿಗೆ ಅಥವಾ ಅವನ ಕುಟುಂಬದ ಸದಸ್ಯನಿಗೆ ಆ ವ್ಯಕ್ತಿಗೆ ಸಂಬಂಧಿಸಿದ ನಿಗಾ, ಚಿಕಿತ್ಸೆ, ತಪಾಸಣೆ, ವಿಚಾರಣೆ, ಸಲಹೆ ಮತ್ತು ರೋಗನಿದಾನ ಅಭಿಪ್ರಾಯಗಳ ಸಾರಾಂಶದ ಪ್ರತಿಯನ್ನು ಲಭ್ಯವಾಗುವಂತೆ ಮಾಡತಕ್ಕದ್ದು.

(2) ತನ್ನ ಕರ್ತವ್ಯಗಳ ಯುಕ್ತ ನಿರ್ವಹಣೆಯಲ್ಲಿ ಒಂದು ಸಾರ್ವಜನಿಕ ಪ್ರಾಧಿಕಾರವು, ಅಥವಾ ಸ್ವಯಂ ವ್ಯಕ್ತಿಯೇ ಅಥವಾ ಈ ಕಾರಣಕ್ಕಾಗಿ ನಿರ್ದಿಷ್ಟವಾಗಿ ಅಧಿಕೃತನಾದ ಯಾವೊಬ್ಬ ಇತರ ವ್ಯಕ್ತಿ ಅಥವಾ ಸಂಬಂಧಪಟ್ಟ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ ಅಥವಾ ಮೃತನಾಗಿದ್ದಲ್ಲಿ ಅಥವಾ (ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿಯಾಗಲೀ) ಅಸಮರ್ಥನಾಗಿದ್ದಲ್ಲಿ ಆ ವ್ಯಕ್ತಿಯ ಪ್ರಕರಣದಲ್ಲಿ ಅಧಿಕೃತನಾಗಿಲ್ಲದ ಆತನ ಕುಟುಂಬದ ಸದಸ್ಯನು, ಖಾಸಗಿ ವೈದ್ಯಕೀಯ ಸಂಸ್ಥೆಗೆ ಅವಶ್ಯಕವಾದ ಶುಲ್ಕವನ್ನು ಪಾವತಿಸಿ ವೈದ್ಯಕೀಯ ದಾಖಲೆಗಳ ಪ್ರತಿಯನ್ನು ಕೋರಬಹುದು, ಖಾಸಗಿ ವೈದ್ಯಕೀಯ ಸಂಸ್ಥೆಯು, ಏಳು ದಿನಗಳೊಳಗಾಗಿ, ಅಂಥ ಪ್ರತಿಯನ್ನು ಒದಗಿಸತಕ್ಕದ್ದು.

(3) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಅಂಥ ಮಾಹಿತಿಯನ್ನು ಪಡೆಯುವುದಕ್ಕಾಗಿ ಚಾರ್ಜುಗಳನ್ನು ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**14. ಮಾಹಿತಿಯನ್ನು ಒದಗಿಸುವುದಕ್ಕಾಗಿ ನಿರ್ಬಂಧಗಳು.–** ಖಾಸಗಿ ವೈದ್ಯಕೀಯ ಸಂಸ್ಥೆಯ ವ್ಯವಸ್ಥಾಪಕನು,–

(ಎ) ಸಾರ್ವಜನಿಕ ಪ್ರಾಧಿಕಾರದ ನಿರ್ದೇಶನದ ಮೇಲೆ ಚಿಕಿತ್ಸೆ ಅಥವಾ ಪರೀಕ್ಷೆ ಅಥವಾ ನಿರ್ಧರಣೆಗಳನ್ನು ನಡೆಸಿದ್ದು ಮತ್ತು ಮಾಹಿತಿಯನ್ನು ಸ್ವೀಕರಿಸುವ ಪ್ರಥಮ ಅಧಿಕಾರ ಅದಕ್ಕೆ ಇದೆಯೆಂದು;

(ಬಿ) ವ್ಯಕ್ತಿಗೆ ನೀಡುವ ವರದಿಯು ವ್ಯಕ್ತಿ ಅಥವಾ ಆತನ ಕುಟುಂಬದ ಸದಸ್ಯರುಗಳಿಗೆ ಬಾಧೆ ಉಂಟುಮಾಡುವುದೆಂದು,

– ಆತನಿಗೆ ಮನವರಿಕೆಯಾದರೆ ಅಂಥ ಕಾರಣಗಳನ್ನು ಬರೆದು ದಾಖಲುಮಾಡಿ ಚಿಕಿತ್ಸೆ ದಾಖಲೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಲು ತಿರಸ್ಕರಿಸಬಹುದು.

**15. [1][ಜುಲ್ಮಾನೆ ಅಥವಾ][1] ನೋಂದಣಿಯ ಅಮಾನತು ಅಥವಾ ರದ್ಧತಿ.–** [1][(1) 7ನೇ ಪ್ರಕರಣದ (8)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನೀಡಿದ ಯಾವುವೇ ನಿರ್ದೇಶನಗಳನ್ನು ಅನುಪಾಲಿಸಲು ವಿಫಲವಾಗುವ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯ ಸಂದರ್ಭದಲ್ಲಿ, ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ನಂತರ, ಐವತ್ತು ಸಾವಿರ ರೂಪಾಯಿಗಳಿಗಿಂತ ಮೀರದಂತೆ ದಂಡವನ್ನು ವಿಧಿಸಬಹುದು ಮತ್ತು ಅನುಪಾಲನೆಗೆ ಸಮಯವನ್ನು ನೀಡಬಹುದು ಅಥವಾ ಸಂಸ್ಥೆಯ ನೋಂದಣಿಯನ್ನು ರದ್ದುಗೊಳಿಸಲು ಮುಂದಾಗಬಹುದು.

(2) ಹೆಚ್ಚಿನ ಶುಲ್ಕ ವಿಧಿಸುವುದಕ್ಕೆ ಸಂಬಂಧಿಸಿದಂತೆ ರೋಗಿಯು ಮಾಡಿದ ದೂರನ್ನು 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು, 10ನೇ ಪ್ರಕರಣದ (2), (4) ಅಥವಾ (5)ನೇ ಉಪಪ್ರಕರಣದಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದಿಂದ ಹೆಚ್ಚಾಗಿ ವಿಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದುದನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

ಪರಂತು, ಒಂದು ನಿರ್ದಿಷ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು ಹಾಗೆ ಹೆಚ್ಚಿನ ಶುಲ್ಕವನ್ನು ವಿಧಿಸಿದ ಸಂದರ್ಭದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು 10ನೇ ಪ್ರಕರಣದ ಉಪಬಂಧಗಳನ್ನು ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ತರುವಾಯದ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಲಿಖಿತದಲ್ಲಿ ದೂರನ್ನು ಸಲ್ಲಿಸತಕ್ಕದ್ದು. ಅಪರಾಧ ರುಜುವಾತಾದ ನಂತರ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು, ಅದು ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತದ ಮೂರರಷ್ಟು ಮೊತ್ತಕ್ಕೆ ವಿಸ್ತರಿಸಬಹುದಾದ ಮೊತ್ತ ಅಥವಾ ಒಂದು ಲಕ್ಷ ರೂಪಾಯಿಗಳ ಮೊತ್ತ ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದಷ್ಟು ದಂಡಕ್ಕೆ ಹೊಣೆಯಾಗತಕ್ಕದ್ದು.

(3) ಹೆಚ್ಚಿನ ಶುಲ್ಕ ವಿಧಿಸುವುದನ್ನು ಹೊರತುಪಡಿಸಿ, ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಸಂಸ್ಥೆಯ ಚಾರ್ಟರ್‌ನಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ, ರೋಗಿಯಿಂದ ದೂರನ್ನು ಸ್ವೀಕರಿಸಿದ ಸಂದರ್ಭದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 11ಎ ಪ್ರಕರಣದ ಉಪಬಂಧಗಳನ್ನು ಖಾಸಗಿ ವೈದ್ಯಕೀಯ ಸಂಸ್ಥೆಗಳು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ಒಂದು ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ, ಮೊದಲನೇ

ಸಲ ಪಾಲಿಸದೇ ಇರುವುದಕ್ಕೆ ಹತ್ತು ಸಾವಿರ ರೂಪಾಯಿಗಳ ದಂಡವನ್ನು ಮತ್ತು ಎರಡನೇ ಸಲ ಪಾಲಿಸದೇ ಇರುವುದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದ ಶೇಕಡ ಐವತ್ತರಷ್ಟು ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದ ಶೇಕಡ ಐವತ್ತರಷ್ಟು ಮೊತ್ತವನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

ಪರಂತು, ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಒಂದು ನಿರ್ದಿಷ್ಟ ಖಾಸಗಿ ವೈದ್ಯಕೀಯ ಸಂಸ್ಥೆಯ ವಿರುದ್ಧದ ಅಂಥ ದೂರಿನ ಸಂದರ್ಭದಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ತರುವಾಯದ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಲಿಖಿತ ದೂರನ್ನು ಸಲ್ಲಿಸತಕ್ಕದ್ದು. ಅಪರಾಧ ರುಜುವಾತಾದ ನಂತರ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು, ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡಕ್ಕೆ ಹೊಣೆಯಾಗತಕ್ಕದ್ದು.][1]

[2][(5)][2] [3][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][3]ವು, ದೂರಿನ ಆಧಾರದ ಮೇಲೆ ಅಥವಾ ಅನ್ಯಥಾ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ನೋಂದಣಿಯ ಷರತ್ತುಗಳ ಉಲ್ಲಂಘನೆಯಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದರೆ, ಲಿಖಿತದಲ್ಲಿ ಆದೇಶವನ್ನು ನೀಡುವ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಖಾಸಗಿ ವೈದ್ಯಕೀಯ ಸಂಸ್ಥೆಯ ನೋಂದಣಿಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಖಾಸಗಿ ವೈದ್ಯಕೀಯ ಸಂಸ್ಥೆಯು ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು [1][ಮತ್ತು ಒಳರೋಗಿಗಳಿಗೆ ತಡೆರಹಿತವಾದ ಆರೋಗ್ಯ ರಕ್ಷಣೆಯನ್ನು ಯುಕ್ತ ಸಮಯದೊಳಗೆ ಮಾಡಲು ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಖಚಿತಪಡಿಸಿಕೊಂಡ ಹೊರತು][1] ಹೊರಡಿಸತಕ್ಕದ್ದಲ್ಲ.

[2][(6)][2] (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಇನ್ನೊಂದು ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸಬೇಕೆಂಬ ನಿರ್ದೇಶನವನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ವರ್ಗಾವಣೆ ಮಾಡುವವರೆಗೂ ಅಂಥ ಒಳರೋಗಿಗಳ ಆರೋಗ್ಯಪಾಲನೆ ಹಾಗೂ ಅಭಿರಕ್ಷಣೆ ಕುರಿತ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

[2][(7)][2] (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು,

(ಎ) 17ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶದ ವಿರುದ್ಧ ಯಾವ ಅಪೀಲನ್ನೂ ಸಲ್ಲಿಸದಿದ್ದಾಗ, ಅಂಥ ಅಪೀಲು ಸಲ್ಲಿಸಲು ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೆ; ಮತ್ತು

(ಬಿ) ಅಂಥ ಅಪೀಲನ್ನು ಸಲ್ಲಿಸಿದ್ದು ಅದು ವಜಾ ಆಗಿರುವಾಗ ಹಾಗೆ ವಜಾ ಮಾಡಿದ ಆದೇಶದ ದಿನಾಂಕದಿಂದ,

– ಪರಿಣಾಮಕಾರಿಯಾಗತಕ್ಕದ್ದು.

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

(3) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**16. ಅಪೀಲು ಪ್ರಾಧಿಕಾರ.–** [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೇಲೆ][1] ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಅಪೀಲು ಪ್ರಾಧಿಕಾರವು ಇರತಕ್ಕದ್ದು, ಎಂದರೆ:–

| | | |
|---|---|---|
| [2][(ಎ) | ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಆಯುಕ್ತರು | ಅಧ್ಯಕ್ಷರು |
| (ಬಿ) | ಕರ್ನಾಟಕ ಆರೋಗ್ಯ ಸೇವೆಗಳ ನಿರ್ದೇಶಕರು | ಸದಸ್ಯರು |
| [2][(ಸಿ) | ಆಯುಷ್ ನಿರ್ದೇಶಕರು (ಆಯುರ್ವೇದ, ಯುನಾನಿ, ಸಿದ್ಧ, ಹೋಮಿಯೋಪತಿ, ಪ್ರಕೃತಿ ಚಿಕಿತ್ಸೆ, ಮತ್ತು ಯೋಗ) | – ಸದಸ್ಯರು |
| (ಡಿ) | ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಸಾಮಾನ್ಯ ಔಷಧ ವೈದ್ಯಕೀಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಒಬ್ಬ ವೈದ್ಯ (Clinician) | – ಸದಸ್ಯರು. |
| (ಇ) | ವೈದ್ಯಕೀಯ ಶಿಕ್ಷಣ ನಿರ್ದೇಶಕರು | –ಸದಸ್ಯರು.][2] |

**ಸೂಚನೆ:–** ಆರೋಗ್ಯ ಸೇವೆಗಳ ನಿರ್ದೇಶಕರು, ಕರ್ನಾಟಕ ಇವರು ಖಾಸಗಿ ವೈದ್ಯಕೀಯ ಸಂಸ್ಥೆಯಲ್ಲಿ ರೋಗಿಗೆ ಅಲೋಪತಿ ಪದ್ಧತಿಯಲ್ಲಿ ಚಿಕಿತ್ಸೆ ನೀಡಿರುವ ಸಂದರ್ಭದಲ್ಲಿಯ ಅಪೀಲಿನ ಸಂಬಂಧದಲ್ಲಿ ಸದಸ್ಯರಾಗಿರತಕ್ಕದ್ದು ಮತ್ತು ಭಾರತೀಯ ವೈದ್ಯಕೀಯ ಮತ್ತು ಹೋಮಿಯೋಪತಿ ನಿರ್ದೇಶಕರು ಇವರು ಇತರ ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಗೆ ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ, ಪ್ರಕೃತಿಚಿಕಿತ್ಸೆ ಅಥವಾ ಸಿದ್ಧಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿರುವ ಸಂದರ್ಭದಲ್ಲಿಯ ಅಪೀಲಿನ ಸಂಬಂಧದಲ್ಲಿ ಸದಸ್ಯರಾಗಿರತಕ್ಕದ್ದು.

[3][ಪರಂತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೇಲಿನ ಅಪೀಲು ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| **(ಎ)** | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** | **ಚೇರ್ಮನ್** |
| **(ಬಿ)** | **ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು** | **ಸದಸ್ಯರು** |
| **(ಸಿ)** | **ನಿರ್ದೇಶಕರು, ಆಯುಷ್** | **ಸದಸ್ಯರು** |
| **(ಡಿ)** | **ನಿರ್ದೇಶಕರು, ವೈದ್ಯಕೀಯ ಶಿಕ್ಷಣ** | **ಸದಸ್ಯರು** |
| **(ಇ)** | **ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಜೆನರಲ್ ಮೆಡಿಸಿನ್ ನಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಒಬ್ಬರು ಕ್ಲಿನಿಷಿಯನ್** | **ಸದಸ್ಯರು** |

ಮತ್ತು ಪರಂತು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2020ರ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ವ್ಯಾಪ್ತಿಯೊಳಗಿನ, 16ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಪೀಲು ಪ್ರಾಧಿಕಾರದ ಮುಂದೆ ಬಾಕಿಯಿರುವ ಎಲ್ಲಾ ಅಪೀಲುಗಳನ್ನು, ಮೊದಲ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಾಗಿನ ಅಪೀಲು ಪ್ರಾಧಿಕಾರಕ್ಕೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅದು, ಅವುಗಳು ತನ್ನ ಮುಂದೆ ದಾಖಲಾಗಿದ್ದಲ್ಲಿ ಹೇಗೋ ಹಾಗೆ ಅವುಗಳನ್ನು ವಿಲೆ ಮಾಡತಕ್ಕದ್ದು.][3]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) 2020ರ ಅಧಿನಿಯಮ ಸಂಖ್ಯೆ 33ರ ಮೂಲಕ ದಿನಾಂಕ: 31.07.2020 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**17. ಅಪೀಲು.–** (1) 24ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದ ಸಂದರ್ಭದಲ್ಲಿ ಹೊರತು 7ನೇ ಪ್ರಕರಣದ ಅಡಿಯಲ್ಲಿ ನೋಂದಣಿಯ ಅರ್ಜಿಯನ್ನು ತಿರಸ್ಕರಿಸಿದ ಅಥವಾ 15ನೇ ಪ್ರಕರಣದ ಅಡಿಯಲ್ಲಿ ನೋಂದಣಿಯನ್ನು ಅಮಾನತುಗೊಳಿಸಲಾದ ಅಥವಾ ರದ್ದುಗೊಳಿಸಲಾದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಮೂಲ ಆದೇಶದಿಂದ ಬಾಧಿತವಾದ ಖಾಸಗಿ ವೈದ್ಯಕೀಯ ಸಂಸ್ಥೆಯು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಫೀಜನ್ನು ಸಂದಾಯಮಾಡಿ ಅಪೀಲು ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅಪೀಲನ್ನು ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

(3) ಅಪೀಲು ಪ್ರಾಧಿಕಾರವು ವಿಚಾರಣೆಯನ್ನು ನಡೆಸಿದ ತರುವಾಯ, ಅಪೀಲು ಸಲ್ಲಿಸಿದ ದಿನಾಂಕದಿಂದ ಸಾಧ್ಯವಾದಷ್ಟು ಅರವತ್ತು ದಿನಗಳೊಳಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕದ್ದು.

**18. ಖಾಸಗಿ ವೈದ್ಯಕೀಯ ಸಂಸ್ಥೆಗಳು ತಮ್ಮಲ್ಲಿರುವ ಸರ್ಕಾರಿ ವೈದ್ಯರುಗಳ ಹೆಸರುಗಳನ್ನು ವರದಿಮಾಡುವುದು.–** ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಸಮಾಲೋಚನೆಗಾಗಿ ಅಥವಾ ಯಾವುದೇ ಇತರೆ ಆಧಾರದ ಮೇಲೆ, ಹಣಸಂದಾಯ ಮಾಡುವ ಮೂಲಕವಾಗಲಿ ಅಥವಾ ಇಲ್ಲದಿರಲಿ, ಸೇವೆಸಲ್ಲಿಸಲು ಬಳಸಿಕೊಳ್ಳುತ್ತಿರುವ ತಮ್ಮಲ್ಲಿನ ಸರ್ಕಾರಿ ವೈದ್ಯರುಗಳ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯವರ ಹೆಸರುಗಳನ್ನು ರಾಜ್ಯಸರ್ಕಾರಕ್ಕೆ ಮತ್ತು [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ಕ್ಕೆ ವರದಿಮಾಡತಕ್ಕದ್ದು.

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**19. ದಂಡನೆಗಳು.–** (1) ಯಾವೊಬ್ಬ ವ್ಯಕ್ತಿಯು, 7ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾಗುವ ನೋಂದಣಿ ಇಲ್ಲದ ಒಂದು ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ, ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ, ಅವನು, ಅಪರಾಧ ನಿರ್ಣಯವಾದ ನಂತರ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು [1][ಒಂದು ಲಕ್ಷ][1] ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಒಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಣಿತ ಅಪರಾಧಿಯಾಗಿದ್ದಲ್ಲಿ, [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು, ಅಂಥ ನೋಂದಣಿಯು ರದ್ದು ಅಥವಾ ಅಮಾನತುಗೊಂಡಿದ್ದು ಅಂಥ ರದ್ದತಿ ಅಥವಾ ಅಮಾನತಿನ ವಿರುದ್ಧ ದಾಖಲಿಸಲಾದ ಅಪೀಲು ಇತ್ಯರ್ಥದಲ್ಲಿದ್ದ ಹೊರತು ಅದನ್ನು ಕೂಡಲೇ ಮುಚ್ಚುವಂತೆ ಆದೇಶಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಇತರೆ ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು ನಿರ್ದೇಶನದಲ್ಲಿ ತಿಳಿಸಿರತಕ್ಕದ್ದು ಮತ್ತು ಅದು, ಅಂಥ ವರ್ಗಾವಣೆ ಮಾಡುವವರೆಗೂ ಒಳರೋಗಿಗಳ ಸುರಕ್ಷತೆ ಮತ್ತು ಅಭಿರಕ್ಷೆಗೆ ಸಂಬಂಧಪಟ್ಟ ಇತರೆ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

(4) ಯಾವೊಬ್ಬ ವ್ಯಕ್ತಿಯು, ನೋಂದಣಿಯ ಷರತ್ತುಗಳನ್ನು ಉಲ್ಲಂಘಿಸಿ ಅಥವಾ 12 ಅಥವಾ 13ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಒಂದು ವೈದ್ಯಕೀಯ ಸಂಸ್ಥೆಯನ್ನು ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ನಿರ್ದೇಶನಗಳನ್ನು ಪಾಲಿಸಲು ವಿಫಲನಾದಲ್ಲಿ, ಅವನು, ಅಪರಾಧ ನಿರ್ಣಿತನಾದ ತರುವಾಯ, [2][XXX][2] [1][ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ][1] ದಂಡನೀಯನಾಗತಕ್ಕದ್ದು ಮತ್ತು ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ, [2][XXX][2] [1][ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ][1] ದಂಡನೀಯನಾಗತಕ್ಕದ್ದು.

(5) ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮದ ಯಾವುದೇ ಇತರೆ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಅವನು, ಅಪರಾಧ ನಿರ್ಣಯವಾದ ನಂತರ, [1][ಒಂದು ಲಕ್ಷ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

[3][(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸುಳ್ಳು, ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಯಾವುದೇ ಫಿರ್ಯಾದನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡುವ ಯಾವೊಬ್ಬ ವ್ಯಕ್ತಿಯು, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೂಲಕ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.][3]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ
(3) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**19ಎ. ಅಪರಾಧದ ಸಂಜ್ಞೇಯತೆ.–** ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದಿಂದ ಅಥವಾ ಇದಕ್ಕಾಗಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು ಲಿಖಿತ ದೂರನ್ನು ನೀಡದ ಹೊರತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ನ್ಯಾಯಾಲಯವು ಅಪರಾಧದ ಸಂಜ್ಞೇಯತೆಯನ್ನು ಕೈಗೊಳ್ಳತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಯಾವೊಬ್ಬ ಬಾಧಿತ ವ್ಯಕ್ತಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಲಭ್ಯವಾಗುವ ನಿವಾರಣೆಗಳನ್ನು ಬಳಸಿಕೊಂಡ ತರುವಾಯ ಮತ್ತು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅಥವಾ ಅಧಿಕೃತ ಅಧಿಕಾರಿಯು, ದೂರನ್ನು ನೀಡಲು ಅರ್ಜಿ ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಲಿಖಿತ ದೂರನ್ನು ಮಾಡಲು ವಿಫಲನಾದ ಸಂದರ್ಭದಲ್ಲಿ, ಸಕ್ಷಮ ನ್ಯಾಯಾಲಯದ ಮೊರೆ ಹೋಗಲು ನಿರ್ಬಂಧಿಸತಕ್ಕದ್ದಲ್ಲ.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**19ಬಿ. ದಂಡಾಧಿಕಾರಿಗಳ ಅಧಿಕಾರವ್ಯಾಪ್ತಿ.–** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ಹೊರತು ಯಾವುದೇ ದಂಡಾಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**20. ಕಂಪನಿಯಿಂದ ಅಪರಾಧಗಳು.–** (1) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ನಿಯಮದ, ಯಾವುದೇ ಉಪಬಂಧಗಳ ವಿರುದ್ಧ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಸಮಯದಲ್ಲಿ, ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು:

ಪರಂತು, ಅಪರಾಧವು, ತನ್ನ ತಿಳುವಳಿಕೆಗೆ ಬಾರದೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಈ ಉಪ–ಪ್ರಕರಣದಲ್ಲಿರುವುದಾವುದೂ, ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಕಂಪನಿಯ ಇತರೆ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಕಂಪನಿಯ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯ ಯಾವುದೇ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತು ಪಡಿಸಲಾದಲ್ಲಿ ಅವನನ್ನು ಈ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ನ್ಯಾಸ, ಫರ್ಮ್, ಸಂಘ ಅಥವಾ ವ್ಯಕ್ತಿಗಳ ಇತರೆ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) "ನಿರ್ದೇಶಕ" ಎಂದರೆ:–

(i) ಫರ್ಮಿನ ಸಂಬಂಧದಲ್ಲಿ, ಫರ್ಮ್‌ನಲ್ಲಿರುವ ಒಬ್ಬ ಪಾಲುದಾರ;

(ii) ಒಂದು ಸಂಘ, ಒಂದು ನ್ಯಾಸ ಅಥವಾ ವ್ಯಕ್ತಿಗಳ ಇತರೆ ಸಂಘ ಎಂದರೆ, ಸಂಘ, ನ್ಯಾಸ ಅಥವಾ ಇತರೆ ಸಂಘದ ನಿಯಮಗಳ ಅಡಿಯಲ್ಲಿ ವಹಿಸಿಕೊಡಲಾದ, ಸಂದರ್ಭಾನುಸಾರ ಸಂಘದ, ನ್ಯಾಸ ಅಥವಾ ಇತರೆ ಸಂಘದ ವ್ಯವಹಾರಗಳ ವ್ಯವಸ್ಥಾಪನೆಯಲ್ಲಿ ತೊಡಗಿಸಿಕೊಂಡವರು.

**21. ಪ್ರವೇಶ, ಪರಿಶೀಲನೆ ಇತ್ಯಾದಿಗಳ ಅಧಿಕಾರ.–** (1) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯಸರ್ಕಾರವು, ರಾಜ್ಯಸರ್ಕಾರದ ಯಾವೊಬ್ಬ ಅಧಿಕಾರಿಯನ್ನು ವಿಶೇಷವಾಗಿ ಈ ಮುಂದಿನವುಗಳಿಗಾಗಿ ಪ್ರಾಧಿಕೃತಗೊಳಿಸಬಹುದು (ಇನ್ನು ಮುಂದೆ ಈ ಪ್ರಕರಣದಲ್ಲಿ ಮತ್ತು 22ನೇ ಪ್ರಕರಣದಲ್ಲಿ ಪ್ರಾಧಿಕೃತ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ),–

(ಎ) ಎಲ್ಲಾ ಸಮಂಜಸ ಸಮಯದಲ್ಲೂ ಮತ್ತು ಅವನು ಯುಕ್ತವೆಂದು ಯೋಚಿಸಬಹುದಾದಂತೆ ರಾಜ್ಯಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಗಳಾದಂಥ ಸಹಾಯಕರ ನೆರವು ಯಾವುದಾದರೂ ಇದ್ದಲ್ಲಿ ಅದರೊಂದಿಗೆ, ಖಾಸಗಿ ವೈದ್ಯಕೀಯ ಸಂಸ್ಥೆ ಎಂದು ಬಳಸಲಾಗುವ ಅಥವಾ ಬಳಸಲಾಗುತ್ತಿದೆ ಎಂಬ ನಂಬಿಕೆಗೆ ಕಾರಣವಾದ ಯಾವುದೇ ಸ್ಥಳವನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಬಿ) ಖಾಸಗಿ ವೈದ್ಯಕೀಯ ಸಂಸ್ಥೆಯ ಆವರಣಗಳನ್ನು ಮತ್ತು ಅದರಲ್ಲಿ ಕಂಡುಬರುವ ಯಾವುದೇ ರಿಜಿಸ್ಟರು, ದಾಖಲೆ, ಸಾಧನ ಸಲಕರಣೆ ವಸ್ತುಗಳು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸುವುದು ಮತ್ತು ಪರಿಶೀಲನೆಯ ವಿಶ್ಲೇಷಣೆ ಅಥವಾ ತನಿಖೆಯ ಉದ್ದೇಶಕ್ಕಾಗಿ ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಯಾವುದೇ ದಸ್ತಾವೇಜು ಅಥವಾ ದಾಖಲೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಅಂಥ ಉದ್ದೇಶಕ್ಕಾಗಿ ತನಗೆ ಅಗತ್ಯವೆಂದು ಭಾವಿಸಬಹುದಾದಷ್ಟು ಅವಧಿಯವರೆಗೆ ಅವುಗಳನ್ನು ತನ್ನಲ್ಲಿ ಉಳಿಸಿಕೊಳ್ಳುವುದು, ಪರಂತು, ಪ್ರಾಧಿಕೃತ ಅಧಿಕಾರಿಯು, ದಸ್ತಾವೇಜುಗಳು ಮತ್ತು ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಂಡ ತರುವಾಯ ಕಾರ್ಯ ಸಾಧ್ಯವಾದಷ್ಟು ಬೇಗನೇ

ಖಾಸಗಿ ವೈದ್ಯಕೀಯ ಸಂಸ್ಥೆಯ ವ್ಯವಸ್ಥಾಪಕನಿಗೆ ಅಂಥ ಮುಟ್ಟುಗೋಲು ಹಾಕಿಕೊಂಡ ಬಗ್ಗೆ ಸೂಕ್ತ ಕಾರಣಗಳನ್ನು ತಿಳಿಸತಕ್ಕದ್ದು.

(ಸಿ) ಅಂಥ ವಿಚಾರಣೆಯನ್ನು ನಡೆಸುವುದು ಮತ್ತು ಸ್ಥಳದಲ್ಲೇ ತೀರ್ಮಾನ ಕೈಗೊಳ್ಳಬಹುದು ಅಥವಾ ಅನ್ಯಥ ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಯಾವೊಬ್ಬ ವ್ಯಕ್ತಿಯ ಹೇಳಿಕೆಯನ್ನು ತೆಗೆದುಕೊಳ್ಳುವುದು.

(ಡಿ) ಈ ಅಧಿನಿಯಮದ ಉದ್ದೇಶಗಳನ್ನು ಕೈಗೊಳ್ಳುವುದಕ್ಕಾಗಿ, ಅವಶ್ಯಕವೆಂದು ಭಾವಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು:

ಪರಂತು, ಯಾವೊಬ್ಬ ವ್ಯಕ್ತಿಯನ್ನು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ತನ್ನನ್ನು ಸ್ವತಃ ಅಪರಾಧಿ ಎಂದು ಸಿಕ್ಕಿಸುವ ಪ್ರವೃತ್ತಿಯುಳ್ಳ ಯಾವುದೇ ಸಾಕ್ಷ್ಯವನ್ನು ನೀಡುವಂತೆ ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ವಸತಿ ಸ್ಥಳವನ್ನು (ಖಾಸಗಿ ವೈದ್ಯಕೀಯ ಸಂಸ್ಥೆ-ಹಾಗೂ-ವಸತಿಗೃಹವಲ್ಲದ್ದು) ಮತ್ತು ಆ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನು ನೀಡಿದ ಶೋಧನಾ ವಾರೆಂಟನ್ನು ಪ್ರಾಧಿಕಾರಿಯು ಹೊಂದಿದ್ದ ಹೊರತು, ಪ್ರಾಧಿಕೃತ ಅಧಿಕಾರಿಯು ಪ್ರವೇಶಿಸತಕ್ಕದ್ದಲ್ಲ ಮತ್ತು ಪರಿಶೋಧಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಅಡಿಯಲ್ಲಿಯ ಎಲ್ಲ ಶೋಧನೆಗಳು ಮತ್ತು ಮುಟ್ಟುಗೋಲುಗಳನ್ನು ಸಾಧ್ಯವಾದಷ್ಟು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

(2) ಪ್ರಾಧಿಕೃತ ಅಧಿಕಾರಿಯು (1)ನೇ ಉಪಪ್ರಕರಣದ ಅಡಿಯಲ್ಲಿ ತಾನು ಮಾಡಿದ ತಪಾಸಣೆ, ಶೋಧನೆ ಮತ್ತು ಮುಟ್ಟುಗೋಲಿನ ಫಲಿತಾಂಶಗಳಿಗೆ ಸಂಬಂಧಿಸಿದಂತೆ ನೋಂದಣಿ ಪ್ರಾಧಿಕಾರಿಗೆ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1] ರಿಯು ಈ ಅಧಿನಿಯಮದ ಅಡಿಯಲ್ಲಿ ಸದರಿ ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

(1)2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**22. ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಆವರಣಗಳನ್ನು ಸೀಲ್ ಮಾಡುವುದು.–** (1) 19ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯು ಮಾಡಿದ ವರದಿಯ ಆಧಾರದ ಮೇಲೆ ಅಥವಾ ಅನ್ಯಥಾ 7ನೇ ಪ್ರಕರಣದ ಅಡಿಯಲ್ಲಿ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿ ಮಾಡದೇ ನಡೆಸಲಾಗುತ್ತಿದೆ ಅಥವಾ ನಿರ್ವಹಿಸಲಾಗುತ್ತಿದೆ ಎಂದು ನೋಂದಣಿ ಅಧಿಕಾರಿಯು ಅಭಿಪ್ರಾಯಪಟ್ಟಲ್ಲಿ, ಅಂಥ ಖಾಸಗಿ ಸಂಸ್ಥೆಯನ್ನು ಕೂಡಲೇ ಮುಚ್ಚುವಂತೆ ಆದೇಶಿಸಬಹುದು ಮತ್ತು ಆವರಣವನ್ನು ಮೊಹರು ಬಂದ್ ಸಹ ಮಾಡಬಹುದು:

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ತೊಂದರೆಗೊಳಗಾಗಿರ ಬಹುದಾದ ವ್ಯಕ್ತಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವು ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರೆ ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು ನಿರ್ದೇಶನವನ್ನು ಒಳಗೊಂಡಿರತಕ್ಕದ್ದು ಮತ್ತು ಅದು, ಅಂಥ ವರ್ಗಾವಣೆ ಮಾಡುವವರೆಗೂ ಒಳರೋಗಿಗಳ ಸುರಕ್ಷತೆ ಮತ್ತು ಅಭಿರಕ್ಷೆಗೆ ಸಂಬಂಧಪಟ್ಟ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

**23. ನೋಂದಣಿ ಅಧಿಕಾರಿಗಳಿಗೆ ನಿರ್ದೇಶನ ನೀಡಲು ರಾಜ್ಯಸರ್ಕಾರದ ಅಧಿಕಾರಗಳು.–** ರಾಜ್ಯ ಸರ್ಕಾರವು, ತನ್ನ ಅಭಿಪ್ರಾಯದಲ್ಲಿ ಅವಶ್ಯಕವೆಂದು ಅಥವಾ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ತನಗೆ ಯುಕ್ತವೆಂದು ಕಂಡುಬಂದಂಥ ನಿರ್ದೇಶನಗಳನ್ನು ನೋಂದಣಿ ಅಧಿಕಾರಿಗೆ ನೀಡಬಹುದು. ರಾಜ್ಯಸರ್ಕಾರವು, ಸದರಿ ನಿರ್ದೇಶನಗಳನ್ನು ಹೊರಡಿಸುವ ಆವಶ್ಯಕತೆಗೆ ಸಂಬಂಧಪಟ್ಟ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ನೋಂದಣಿ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**24. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ವಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ರಾಜ್ಯಸರ್ಕಾರದ ಅಥವಾ ಯಾವೊಬ್ಬ ಅಧಿಕಾರಿಯ, ಪ್ರಾಧಿಕಾರದ ಅಥವಾ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**25. ತೊಂದರೆಗಳ ನಿವಾರಣೆ.–** ಈ ಅಧಿನಿಯಮ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಆದೇಶವನ್ನು ಹೊರಡಿಸುವ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಮತ್ತು ಆ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬಂದ ಉಪಬಂಧಗಳನ್ನು ಆದೇಶದ ಮೂಲಕ ಮಾಡಬಹುದು:

ಪರಂತು, ಗೊತ್ತುಪಡಿಸಲಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**26. ನಿಯಮಗಳ ರಚನಾಧಿಕಾರ.–** (1) ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು, ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ನೋಂದಣಿಗಾಗಿ ಅರ್ಜಿಯನ್ನು ಯಾವ ರೀತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು 5ನೇ ಪ್ರಕರಣದ ಅಡಿಯಲ್ಲಿ ಸಂದಾಯವಾಗತಕ್ಕ ಶುಲ್ಕ;

(ಬಿ) 6ನೇ ಪ್ರಕರಣದ ಅಡಿಯಲ್ಲಿ ನೋಂದಣಿಗಾಗಿ ಅಂಥ ಇತರೆ ಅಂಶಗಳು;

(ಸಿ) ನೋಂದಣಿಯ ನವೀಕರಣಕ್ಕಾಗಿ ಸಂದಾಯವಾಗತಕ್ಕ ಶುಲ್ಕಗಳ ರೀತಿ ಮತ್ತು ಸಂದಾಯ;

(ಡಿ) 9ನೇ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ನಿರ್ವಹಿಸತಕ್ಕ ಗುಣಮಟ್ಟಗಳು;

(ಇ) 12ನೇ ಪ್ರಕರಣದ ಅಡಿಯಲ್ಲಿ ಚಿಕಿತ್ಸಾಲಯ (ಕ್ಲಿನಿಕಲ್) ದಾಖಲೆಗಳನ್ನು ನಿರ್ವಹಿಸತಕ್ಕ ಕ್ರಮ;

(ಎಫ್) 17ನೇ ಪ್ರಕರಣದ ಅಡಿಯಲ್ಲಿ ಯಾವ ಕ್ರಮದಲ್ಲಿ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿಗಾಗಿನ ಶುಲ್ಕಗಳು;

(ಎಚ್) ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಅಗತ್ಯಪಡಿಸಲಾದ ಅಥವಾ ನಿಯಮಿಸ ಬೇಕಾದವುಗಳೆಂದು ಅನುಮತಿಸಲಾದ ಅಥವಾ ಯಾವುದರ ಸಂಬಂಧದಲ್ಲಿ ಈ ಅಧಿನಿಯಮದಲ್ಲಿ ಉಪಬಂಧಗಳನ್ನು ಮಾಡಿರುವುದಿಲ್ಲವೋ ಅಥವಾ ಅಪರ್ಯಾಪ್ತ ಉಪಬಂಧಗಳನ್ನು ಮಾಡಲಾಗಿದೆಯೋ ಮತ್ತು ಅಧಿನಿಯಮದ ಸೂಕ್ತ ಜಾರಿಗೊಳಿಸುವಿಕೆಗಾಗಿ ಅವಶ್ಯವೆಂದು ರಾಜ್ಯಸರ್ಕಾರವು ಅಭಿಪ್ರಾಯ ಪಡುವ ಒಂದು ಉಪಬಂಧಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳು;

**27. ನಿಯಮಗಳು ಮತ್ತು ಆದೇಶಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕು.–** 26ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶ ಮತ್ತು 27ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ, ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಆದೇಶದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**28. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ಖಾಸಗಿ ನರ್ಸಿಂಗ್ ಹೋಂಗಳ (ನಿಯಂತ್ರಣ) ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 75) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದಾಗ್ಯೂ,–

(ಎ) ನಿರಸಿತ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ನೋಂದಣಿಗಾಗಿ ಅಥವಾ ನವೀಕರಣಕ್ಕಾಗಿ ನಿರಸಿತಗೊಂಡ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿದ ಎಲ್ಲಾ ಅರ್ಜಿಗಳು ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಇತ್ಯರ್ಥದಲ್ಲಿರುವ ಅರ್ಜಿಗಳನ್ನು ಕೊನೆಗೊಳಿಸತಕ್ಕದ್ದು ಮತ್ತು ಅಂಥ ಅರ್ಜಿಯ ಸಂಬಂಧದಲ್ಲಿ ಯಾವುದಾದರೂ ಶುಲ್ಕ ಸಂದಾಯಮಾಡಿದ್ದಲ್ಲಿ, ಅದನ್ನು ಅರ್ಜಿದಾರನಿಗೆ ಮರುಸಂದಾಯಮಾಡತಕ್ಕದ್ದು ಮತ್ತು ಅಂಥ ಅರ್ಜಿದಾರರು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೋಂದಣಿಗಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

**[1][ಅನುಸೂಚಿ**
**(2ನೇ ಪ್ರಕರಣದ (ಎಸ್) ಖಂಡ ಮತ್ತು 11ಬಿ ಪ್ರಕರಣವನ್ನು ನೋಡಿ)**
**ರೋಗಿಯ ಚಾರ್ಟರ್ ಮತ್ತು ಸಂಸ್ಥೆಯ ಚಾರ್ಟರ್**

**I. ರೋಗಿಯ ಚಾರ್ಟರ್**

**ಎ. ರೋಗಿಯ ಹಕ್ಕುಗಳು:**

**(1) ರಕ್ಷಣೆ :** ಪ್ರತಿಯೊಬ್ಬ ರೋಗಿಯು, ಈ ಮುಂದಿನವುಗಳಿಗಾಗಿ ಹಕ್ಕನ್ನು ಹೊಂದಿರತಕ್ಕದ್ದು,–

(i) ಪ್ರಾರಂಭಿಕ ಮತ್ತು ತದನಂತರದ ಅನಾರೋಗ್ಯ, ಸಾಮಾಜಿಕ–ಆರ್ಥಿಕ ಸ್ಥಾನಮಾನ, ವಯಸ್ಸು, ಲಿಂಗ, ಲೈಂಗಿಕ ಸ್ಥಾನಮಾನ, ಧರ್ಮ, ಜಾತಿ, ಸಾಂಸ್ಕೃತಿಕ ಪ್ರಾಮುಖ್ಯತೆಗಳು, ಭಾಷಾ ಮತ್ತು ಭೌಗೋಳಿಕ ಮೂಲಗಳು ಅಥವಾ

ರಾಜಕೀಯ ಸಂಯೋಜನೆಗಳು ಇವುಗಳೆಲ್ಲವನ್ನು ಗಣನೆಗೆ ತೆಗೆದುಕೊಳ್ಳದೇ ಚಿಕಿತ್ಸೆಯನ್ನು ಸ್ವೀಕರಿಸುವ ಹಕ್ಕು;

(ii) 11ನೇ ಪ್ರಕರಣದ (i)ನೇ ಉಪಪ್ರಕರಣದಲ್ಲಿ ಪಟ್ಟಿಮಾಡಲಾದ ಪ್ರಕರಣಗಳಲ್ಲಿ ಮುಂಗಡ ಪಾವತಿಯನ್ನು ಕೇಳದೆಯೇ ಚಿಕಿತ್ಸೆಯನ್ನು ಪಡೆಯುವ ಹಕ್ಕು;

(iii) ಆತನ ವೈದ್ಯಕೀಯ ಸಮಸ್ಯೆಗಳು ಮತ್ತು ಕಳಕಳಿಗಳನ್ನು ಹೇಳಿಕೊಳ್ಳುವ ಹಕ್ಕು;

(iv) ವೈದ್ಯರು ಲಿಖಿತ ಸೂಚಿಯನ್ನು ಸ್ಪಷ್ಟವಾಗಿ ಬರೆಯುವಂತೆ ಮತ್ತು ಔಷಧ ಪ್ರಮಾಣ (dosage), ಮಾಡಬೇಕಾಗಿರುವುದು ಮತ್ತು ಮಾಡಬಾರದಾದ್ದು ಹಾಗೂ ಔಷಧಿಗಳಿಗಾಗಿ ಜನೌಷಧಿ (generic) ಆಯ್ಕೆಗಳ ಕುರಿತು ವಿವರವಾಗಿ ಆತನಿಗೆ ವಿವರಿಸುವುದನ್ನು ವೈದ್ಯರಿಂದ ನಿರೀಕ್ಷಿಸುವುದು; ಮತ್ತು

(v) ತುರ್ತು ಸಂದರ್ಭದಲ್ಲಿ ಯಾರನ್ನು ಸಂಪರ್ಕಿಸಬೇಕೆಂಬ ಬಗ್ಗೆ ಮಾಹಿತಿ ಮತ್ತು ಸಂಪರ್ಕವನ್ನು ಪಡೆಯುವುದು;

(vi) 9ಎ ಪ್ರಕರಣದ (2)ನೇ ಉಪಪ್ರಕರಣದಲ್ಲಿನ (ಸಿ) ಖಂಡದ ಅಡಿಯಲ್ಲಿ ನಿಯಮಿಸಲಾದ ವಿಧ್ಯುಕ್ತ ನಿರೂಪಣೆಗಳ ಮಾನದಂಡಗಳಿಗೆ ಅನುಸಾರವಾಗಿ ಚಿಕಿತ್ಸೆಯನ್ನು ಪಡೆಯುವ ಹಕ್ಕು;

(vii) 10ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದ ವಿಧಾನದಲ್ಲಿ ಚಾರ್ಜುಗಳ ಅನುಸೂಚಿಯ ಬಗ್ಗೆ ಮಾಹಿತಿಯನ್ನು ತಿಳಿಯುವ ಹಕ್ಕು;

(viii) 10ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ದರಗಳಿಗಿಂತ ಹೆಚ್ಚಿಲ್ಲದ ದರಗಳನ್ನು ವಿಧಿಸದಿರುವ ಹಕ್ಕು; ಮತ್ತು

(ix) 12ನೇ ಪ್ರಕರಣದ (3)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಚಿಕಿತ್ಸಾ ದಾಖಲೆಗಳನ್ನು ಪಡೆಯುವ ಹಕ್ಕು.

**(2) ಗೌಪ್ಯತೆ ಮತ್ತು ಗೌರವ.–** (ಎ) ಪ್ರತಿಯೊಬ್ಬ ರೋಗಿಯು ಈ ಮುಂದಿನವುಗಳಿಗಾಗಿ ಹಕ್ಕನ್ನು ಹೊಂದಿರತಕ್ಕದ್ದು,–

(i) ವೈಯಕ್ತಿಕ ಗೌರವದ ಹಕ್ಕು ಮತ್ತು ಯಾವುದೇ ಕಳಂಕವಿಲ್ಲದೆ ಮತ್ತು ಯಾವುದೇ ಬೇಧಭಾವವಿಲ್ಲದೆ ಸೇವೆಯನ್ನು ಪಡೆಯುವುದು;

(ii) ಪರೀಕ್ಷೆ ಮತ್ತು ಚಿಕಿತ್ಸೆಯ ಅವಧಿಯಲ್ಲಿ ಖಾಸಗಿತನ;

(iii) ದೈಹಿಕ ದುರುಪಯೋಗದಿಂದ ಮತ್ತು ನಿರ್ಲಕ್ಷ್ಯದಿಂದ ರಕ್ಷಣೆ;

(iv) ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಗಳಿಗೆ ಅವಕಾಶ ನೀಡುವುದು; ಮತ್ತು

(v) ಅವರ ವೈದ್ಯಕೀಯ ಸ್ಥಿತಿಯ ಕುರಿತು ಗೌಪ್ಯತೆಯ ಹಕ್ಕು.

(ಬಿ) ರೋಗಿಯು ಮೃತನಾದ ಸಂದರ್ಭದಲ್ಲಿ, 11ನೇ ಪ್ರಕರಣದ (vi)ನೇ ಖಂಡದ ಅನುಸಾರವಾಗಿ ಬಾಕಿಗಳ ಪೂರ್ವ ಸಂದಾಯವನ್ನು ಕೇಳದೇ ತಕ್ಷಣವೇ ಮೃತ ದೇಹವನ್ನು ಪಡೆಯುವ ಹಕ್ಕನ್ನು ಆತನ ಕುಟುಂಬದ ಸದಸ್ಯರು ಹೊಂದಿರತಕ್ಕದ್ದು

**(3) ಮಾಹಿತಿ.–** ಪ್ರತಿಯೊಬ್ಬ ರೋಗಿ ಅಥವಾ ಆತನ ಅಧಿಕೃತ ಕುಟುಂಬ ಸದಸ್ಯರು ಈ ಮುಂದಿನ ಹಕ್ಕನ್ನು ಹೊಂದಿರತಕ್ಕದ್ದು,–

(i) ರೋಗಿಯ ಆದ್ಯತೆಯ ಮತ್ತು ಆತನು ಕಷ್ಟಪಡದೆ ಅರ್ಥಮಾಡಿಕೊಳ್ಳುವ ವಿಧಾನದಲ್ಲಿನ ಭಾಷೆಯಲ್ಲಿ ಆತನಿಗೆ ಮಾಹಿತಿಯನ್ನು ಒದಗಿಸುವುದು;

(ii) ವೈದ್ಯಕೀಯ ಸಮಸ್ಯೆ, ಲಿಖಿತ ಸೂಚಿ, ಚಿಕಿತ್ಸೆ ಮತ್ತು ಕಾರ್ಯವಿಧಾನದ ವಿವರಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳುವುದು;

(iii) ಅತ್ಯಂತ ಕಾರ್ಯತತ್ಪರತೆ ಮತ್ತು ಪಾರದರ್ಶಕತೆಯಿಂದ ಆತನ ರಕ್ಷಣೆಯ ಕುರಿತು ಮಾಹಿತಿ ಪೂರ್ಣ ನಿರ್ಧಾರವನ್ನು ಮಾಡುವಲ್ಲಿ ಆತನನ್ನು ಸಮರ್ಥಗೊಳಿಸುವ ಆತನ ಮಾಹಿತಿ ಪೂರ್ಣ ಒಪ್ಪಿಗೆಯ ದಾಖಲೀಕರಣ ಪ್ರಕ್ರಿಯೆ;

(iv) ಅಪಾಯ ಸಂಭವಗಳು, ಪ್ರಯೋಜನಗಳು ನಿರೀಕ್ಷಿತ ಚಿಕಿತ್ಸಾ ಫಲಿತಾಂಶಗಳು ಮತ್ತು ಆಗಬಹುದಾದ ತೊಂದರೆಗಳ ಬಗ್ಗೆ ಆತನಿಗೆ ತಿಳುವಳಿಕೆ ನೀಡಿ ಆತನು ಮಾಹಿತಿ ಪೂರ್ಣ ನಿರ್ಧಾರಗಳನ್ನು ಮಾಡಲು ಸಮರ್ಥಗೊಳಿಸುವುದು ಮತ್ತು ರಕ್ಷಣಾ ಯೋಜನೆ ಮತ್ತು ಸೇವಾ ನೀಡಿಕೆ ಪ್ರಕ್ರಿಯೆಯಲ್ಲಿ ಆತನನ್ನು ಸೇರಿಸಿಕೊಳ್ಳುವುದು;

(v) ಅವರಿಗೆ ಚಿಕಿತ್ಸೆ ನೀಡುವ ಔಷಧಿಯ ಹೆಸರುಗಳು, ಔಷಧ ಪ್ರಮಾಣಗಳು ಮತ್ತು ಅವುಗಳ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಮಾಹಿತಿಯನ್ನು ಕೋರುವುದು;

(vi) ಆತನ ಕ್ಲಿನಿಕಲ್ ದಾಖಲೆಗಳ ಪ್ರತಿಯನ್ನು ನೋಡುವ ಮತ್ತು ಸ್ವೀಕರಿಸುವ ಕೋರಿಕೆ;

(vii) ಚಿಕಿತ್ಸೆಯ ನಿರೀಕ್ಷಿತ ವೆಚ್ಚದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಿವಿಧ ವೆಚ್ಚಗಳು ಮತ್ತು ಚಾರ್ಜುಗಳ ಬಾಬುವಾರು ಸ್ವರೂಪದಲ್ಲಿ ನೀಡುವುದು;

(viii) ಆಸ್ಪತ್ರೆಯ ನಿಯಮಗಳು ಮತ್ತು ವಿನಿಯಮಗಳ ಕುರಿತು ಮಾಹಿತಿ; ಮತ್ತು

(ix) ಅಂಗದಾನದ ಕುರಿತು ಮಾಹಿತಿ.

**(4) ಪ್ರಾಮುಖ್ಯತೆಗಳು.–** ಪ್ರತಿಯೊಬ್ಬ ರೋಗಿ ಈ ಮುಂದಿನ ಹಕ್ಕನ್ನು ಹೊಂದಿರತಕ್ಕದ್ದು,–

(i) ಆತನ ವೈದ್ಯಕೀಯ ಸ್ಥಿತಿಯ ಕುರಿತು ಎರಡನೇ ಅಭಿಪ್ರಾಯವನ್ನು ಕೋರುವುದು; ಮತ್ತು

(ii) ಆತನ ಚಿಕಿತ್ಸೆಯ ಆಯ್ಕೆಗಳನ್ನು ಪಡೆಯುವುದು, ಅದರಿಂದ ಆತನು ತನಗೆ ಯಾವುದು ಉತ್ತಮವಾಗಿ ಹೊಂದುವುದೆಂದು ಆಯ್ಕೆ ಮಾಡಿಕೊಳ್ಳಬಹುದು.

**(5) ಪರಿಹಾರದ ಹಕ್ಕು.–** ಪ್ರತಿಯೊಬ್ಬ ರೋಗಿ ಈ ಮುಂದಿನ ಹಕ್ಕನ್ನು ಹೊಂದಿರತಕ್ಕದ್ದು,–

(i) ಈ ಉದ್ದೇಶಕ್ಕಾಗಿ ಸಮರ್ಪಿತವಾಗಿರುವ ಆರೋಗ್ಯ ವೈದ್ಯಕೀಯ ರಕ್ಷಣೆಯನ್ನು ಒದಗಿಸುವ ಸಂಸ್ಥೆಯು ಅಥವಾ ಸರ್ಕಾರಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೂಲಕ ನ್ಯಾಯವನ್ನು ಪಡೆಯುವುದು;

(ii) ಆತನ ಕಳಕಳಿಯ ಬಗ್ಗೆ ಮುಕ್ತವಾಗಿ ಮತ್ತು ಪ್ರಾಮಾಣಿಕವಾಗಿ ಹೇಳಿಕೊಳ್ಳುವುದು; ಮತ್ತು

(iii) ಖಾಸಗಿ ವೈದ್ಯಕೀಯ ಸಂಸ್ಥೆಯಲ್ಲಿನ ಉನ್ನತ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸುವುದು ಮತ್ತು ದೂರಿನ ಫಲಿತಾಂಶದ ಕುರಿತು ಲಿಖಿತ ಬರಹಕ್ಕೆ ಒತ್ತಾಯಪಡಿಸುವುದು.

ಬಿ. **ರೋಗಿಯ ಹೊಣೆಗಾರಿಕೆಗಳು.–**

**(1) ಬಹಿರಂಗಪಡಿಸುವುದರಲ್ಲಿ ಪ್ರಾಮಾಣಿಕತೆ.–** ಪ್ರತಿಯೊಬ್ಬ ರೋಗಿಯು, ಕುಟುಂಬದ ಅಥವಾ ವೈದ್ಯಕೀಯ ಇತಿಹಾಸವನ್ನು ಬಹಿರಂಗಪಡಿಸುವಲ್ಲಿ ಚಿಕಿತ್ಸೆ ನೀಡುವ ವೈದ್ಯರೊಂದಿಗೆ ಪ್ರಾಮಾಣಿಕತೆ ಇರತಕ್ಕದ್ದು;

**(2) ಚಿಕಿತ್ಸೆಯ ಅನುಪಾಲನೆ.–** ಪ್ರತಿಯೊಬ್ಬ ರೋಗಿಯು,–

(i) ವೈದ್ಯರ ಸಂದರ್ಶನಾ ಸಮಯಗಳನ್ನು (appointment) ಸರಿಯಾಗಿ ಪಾಲಿಸುವುದು;

(ii) ವೈದ್ಯರ ಚಿಕಿತ್ಸಾ ಯೋಜನೆಯ ಅನುಸರಣೆಯನ್ನು ಅತ್ಯುತ್ತಮವಾಗಿ ಪಾಲಿಸುವುದು;

(iii) ವೈದ್ಯರ ಮತ್ತು ಆತನ ಚಿಕಿತ್ಸೆಯ ಕುರಿತು ನೈಜ ನಿರೀಕ್ಷಣೆಗಳನ್ನು ಇಟ್ಟುಕೊಳ್ಳುವುದು;

(iv) ಚಿಕಿತ್ಸೆಯ ಯಾವುದೇ ಭಾಗವನ್ನು ಅರ್ಥೈಸಿಕೊಳ್ಳಲು ಕಷ್ಟವಾದಲ್ಲಿ ಅಥವಾ ಚಿಕಿತ್ಸೆಯನ್ನು ಅನುಸರಿಸುವಲ್ಲಿ ಯಾವುದೇ ಸವಾಲುಗಳು ಕಂಡುಬಂದಲ್ಲಿ ಅದರ ಬಗ್ಗೆ ವೈದ್ಯರಿಗೆ ಮಾಹಿತಿ ನೀಡಿ ಅವರ ಗಮನಕ್ಕೆ ತರುವುದು; ಮತ್ತು

(v) ಮನೆಯಲ್ಲಿ ಮಾಡಲು ನಿಯಮಿಸಲಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಒಳಗೊಳ್ಳುವ ಮೂಲಕ ವೈದ್ಯಕೀಯ ಸೇವೆಯಲ್ಲಿ ಜಾಣತನದಿಂದ ಭಾಗವಹಿಸುವ ಸಂಕಲ್ಪವನ್ನು ಪ್ರದರ್ಶಿಸುವುದು.

**(3) ಆರೋಗ್ಯ ವರ್ಧನೆಗಾಗಿ ಸಂಕಲ್ಪ.–** ಪ್ರತಿಯೊಬ್ಬ ರೋಗಿಯು ಉತ್ತಮ ಆರೋಗ್ಯಕ್ಕಾಗಿ ಆರೋಗ್ಯಕರ ಅಭ್ಯಾಸಗಳು ಮತ್ತು ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಮಾಡತಕ್ಕದ್ದು ಮತ್ತು ಆರೋಗ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳತಕ್ಕದ್ದು.

**(4) ಪಾರದರ್ಶಕತೆ ಮತ್ತು ಪ್ರಾಮಾಣಿಕತೆ.–** ಪ್ರತಿಯೊಬ್ಬ ರೋಗಿಯು,–

(i) ಪರಿಣಾಮಕಾರಿ ಚಿಕಿತ್ಸಾ ಫಲಿತಾಂಶಗಳಿಗಾಗಿ ನಿಯಮಿಸಿದ ಔಷಧಿಗಳು ಮತ್ತು ಅವುಗಳಿಂದಾಗುವ ವ್ಯತಿರಿಕ್ತ ಪರಿಣಾಮಗಳು ಮತ್ತು ಇತರ ಅನುಸರಣೆಗಳು ಒಳಗೊಂಡಂತೆ ಚಿಕಿತ್ಸಾ ಕ್ರಮಗಳನ್ನು (ಥೆರಪಿಗಳನ್ನು) ಅರ್ಥೈಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುವುದು;

(ii) ಮುಚ್ಚುಮರೆಯ ಬಿಲ್ಲುಗಳು ಮತ್ತು ತಪ್ಪಾದ ಪ್ರಮಾಣ ಪತ್ರಗಳನ್ನು ಮತ್ತು / ಅಥವಾ ಕಾನೂನುಬಾಹಿರವಾಗಿ ವಾದಿಸಿ ಅದನ್ನು ಒತ್ತಾಯ ಪೂರ್ವಕವಾಗಿ ಕೋರದಿರುವುದು;

(iii) ಸಮಾಧಾನ ಹೊಂದದ ಸಂದರ್ಭದಲ್ಲಿ ವೈದ್ಯರಿಗೆ ಮಾಹಿತಿ ನೀಡಿ ಅವರೊಂದಿಗೆ ಚರ್ಚಿಸತಕ್ಕದ್ದು; ಮತ್ತು

(iv) ವಂಚನೆ ಮತ್ತು ತಪ್ಪಾದ ಕೆಲಸದ ಬಗ್ಗೆ ವರದಿ ನೀಡುವುದು;

**(5) ನಡತೆ.–** ಪ್ರತಿಯೊಬ್ಬ ರೋಗಿಯು,–

(i) ವೈದ್ಯರು ಮತ್ತು ಸೇವೆ ಹಾಗೂ ಚಿಕಿತ್ಸೆ ನೀಡುವ ವೈದ್ಯಕೀಯ ಸಿಬ್ಬಂದಿಯನ್ನು ಗೌರವಿಸತಕ್ಕದ್ದು;

(ii) ಆಸ್ಪತ್ರೆ ಅಥವಾ ಸೌಕರ್ಯದ ನಿಯಮಗಳಿಗೆ ಬದ್ಧರಾಗಿರತಕ್ಕದ್ದು;

(iii) 10ನೇ ಪ್ರಕರಣದ ಅನುಸಾರವಾಗಿ ಮುಂಗಡವಾಗಿ ವಿವರಿಸಿದ ಚಿಕಿತ್ಸೆಯ ಒಪ್ಪಿತ ವೆಚ್ಚಗಳನ್ನು ಭರಿಸತಕ್ಕದ್ದು ಮತ್ತು ಸಕಾಲದಲ್ಲಿ ಬಿಲ್ಲುಗಳನ್ನು ಪಾವತಿಸತಕ್ಕದ್ದು; ಮತ್ತು

(iv) ವೈದ್ಯರು ಅಥವಾ ಆಸ್ಪತ್ರೆಯ ಸಿಬ್ಬಂದಿಯನ್ನು ದುರಪಯೋಗಪಡಿಸಿಕೊಳ್ಳುವ, ಅವರ ಮೇಲೆ ಹಲ್ಲೆ ಮಾಡುವ ಅಥವಾ ಅವರಿಗೆ ತೊಂದರೆಯುಂಟು ಮಾಡುವುದರಲ್ಲಿ ಭಾಗವಹಿಸತಕ್ಕದ್ದಲ್ಲ. (ಯಾವುದೇ ಉಲ್ಲಂಘನೆಯು ಕರ್ನಾಟಕ ವೈದ್ಯಕೀಯ ಸೇವಾ ಸಿಬ್ಬಂದಿಯ ಮೇಲೆ ಹಿಂಸೆ ಮತ್ತು ವೈದ್ಯಕೀಯ ಸೇವಾ ಸಂಸ್ಥೆಗಳ ಸ್ವತ್ತಿಗೆ ಹಾನಿ ತಡೆಗಟ್ಟುವ ಅಧಿನಿಯಮ, 2009ರ (2009ರ ಕರ್ನಾಟಕ ಅಧಿನಿಯಮ 1) ಅಡಿಯಲ್ಲಿ ದಂಡಕ್ಕೆ ಕಾರಣವಾಗಬಹುದು).

**II. ಖಾಸಗಿ ವೈದ್ಯಕೀಯ ಸಂಸ್ಥೆಯ ಚಾರ್ಟರ್:–**

**(1) ಪಾರದರ್ಶಕತೆ ಮತ್ತು ಪ್ರಾಮಾಣಿಕತೆ.–** ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ಕಛೇರಿ ಸಂದರ್ಶನಗಳು, ಕಾರ್ಯವಿಧಾನಗಳು, ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸೆಗಾಗಿ ಮುದ್ರಿತ ಅನುಸೂಚಿಯನ್ನು ಒದಗಿಸುವುದು ಮತ್ತು ಐಟಂವಾರು ಬಿಲ್ಲುಗಳನ್ನು ಒದಗಿಸತಕ್ಕದ್ದು; ಮತ್ತು

(ii) ಪ್ರಸ್ತಾವಿತ ರೋಗಪತ್ತೆ (diagnostic) ಕ್ರಮಗಳು ಅಥವಾ ಚಿಕಿತ್ಸೆಗಳನ್ನು ನೆರವೇರಿಸುವಲ್ಲಿ ವೈದ್ಯರ ವಿದ್ಯಾರ್ಹತೆಗಳ ಬಗ್ಗೆ ಮಾಹಿತಿ ನೀಡತಕ್ಕದ್ದು.

**(2) ರೋಗಿ ಸ್ನೇಹಿ.–** ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–

(i) ಪ್ರತಿಯೊಬ್ಬ ರೋಗಿಯನ್ನು ಕನಿಷ್ಟ ಕಾಯುವಿಕೆಯ ಅವಧಿಯಲ್ಲಿ ಚರ್ಚಿಸಲು ಮತ್ತು ಪರೀಕ್ಷಿಸಲು ಅವಶ್ಯಕವಾದ ವೇಳೆ ಮತ್ತು ಆತನ ಸಮಸ್ಯೆಗಳು ಮತ್ತು ಕಳಕಳಿಗಳನ್ನು ಯಾವುದೇ ಅಡಚಣೆಗಳಿಲ್ಲದೆ ಅಥವಾ ತೊಂದರೆಗಳಿಲ್ಲದೆ ಹೇಳಲು ಅನುವಾಗುವಂಥ ರೀತಿಯಲ್ಲಿ ವೈದ್ಯರ ಭೇಟಿಯ ಸಂದರ್ಶನಾ ಸಮಯಗಳನ್ನು ನೀಡುವುದು; ಮತ್ತು

(ii) ರೋಗಿಗೆ ಆತನ ಸ್ನೇಹಿತ ಅಥವಾ ಸಂಬಂಧಿಯನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರುವಂತೆ ಪ್ರೋತ್ಸಾಹಿಸುವುದು;

**(3) ರೋಗಿಯ ತಿಳುವಳಿಕೆಗಾಗಿ ಪರಿಣಾಮಕಾರಿ ಸಂವಹನ.–** ಪ್ರತಿಯೊಬ್ಬ ವೈದ್ಯನು,–

(i) ರೋಗಿಯ ಪೂರ್ವ ಮಾಹಿತಿ, ಮುಂದಿನ ರೋಗಪತ್ತೆ (diagnostic) ಚಟುವಟಿಕೆ ಮತ್ತು ಚಿಕಿತ್ಸೆಯ ಕುರಿತು ಸರಳವಾದ ಪದಗಳಲ್ಲಿ ಆತನಿಗೆ ಸುಲಭವಾಗಿ ಅರ್ಥವಾಗಲು ಅನುವಾಗುವಂತೆ ವಿವರಿಸುವುದು;

(ii) ರೋಗಿಯು ಪೂರ್ಣ ಮಾಹಿತಿಯುಕ್ತ ನಿರ್ಧಾರಗಳನ್ನು ಕೈಗೊಳ್ಳಲು ಆತನನ್ನು ಸಮರ್ಥಗೊಳಿಸುವುದಕ್ಕೆ ಮಾಹಿತಿ, ಚಿಕಿತ್ಸಾ ವಿಧಾನವನ್ನು ನಿಯಮಿಸುವುದು ಮತ್ತು ರೋಗಪತ್ತೆ (diagnostic), ಚಿಕಿತ್ಸೆ ಮತ್ತು ಔಷಧ ಚಿಕಿತ್ಸೆ ಆಯ್ಕೆಗಳ ಬಗ್ಗೆ ಆತನೊಂದಿಗೆ ಚರ್ಚಿಸುವುದು;
(iii) ಪ್ರತಿಯೊಂದು ನಿರ್ದಿಷ್ಟ ಕ್ರಮಗಳ ಬಗ್ಗೆ ಆತನಿಗೆ ಮನದಟ್ಟು ಮಾಡಿ ಪರ್ಯಾಯವಾದ ಪ್ರಯೋಜನಗಳು ಮತ್ತು ಅಪಾಯ ಸಂಭವಗಳ ಬಗ್ಗೆ ಆತನನ್ನು ಸಮಾಧಾನಗೊಳಿಸಿ ಮತ್ತು ಆತನು ತನ್ನ ಒಪ್ಪಿಗೆಯನ್ನು ನೀಡುವವರೆಗೂ ಮುಂದುವರೆಯತಕ್ಕದ್ದಲ್ಲ.

**(4) ರೋಗಿಯ ಚಾರ್ಟರ್‌ನ ಅನುಷ್ಠಾನ.–** ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು,–
(i) ರೋಗಿಯ ಚಾರ್ಟರನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಪ್ರಕಟಿಸತಕ್ಕದ್ದು;
(ii) ಆರೋಗ್ಯ ಸೇವೆಯನ್ನು ಒದಗಿಸುವ ಸಂಸ್ಥೆಗಳಲ್ಲಿ ರೋಗಿಯ ಚಾರ್ಟರನ್ನು ಪ್ರಮುಖವಾದ ಮತ್ತು ಹಲವಾರು ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು; ಮತ್ತು
(iii) ಪ್ರತಿದಿನದ ವೈದ್ಯಕೀಯ ಪದ್ಧತಿಯಲ್ಲಿ ತನ್ನ ನೈಜ ಉತ್ಸಾಹದಿಂದ ರೋಗಿಯ ಚಾರ್ಟರನ್ನು ಅನುಷ್ಠಾನಗೊಳಿಸತಕ್ಕದ್ದು.][1]

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

******

## HEALTH AND FAMILY WELFARE DEPARTMENT SECRETARIAT

## NOTIFICATION

No.HFW 94 CGE 2008, Bangalore, Dated:10TH November, 2009

In exercise of the powers conferred by sub-section (2) of Section 1 of the Karnataka Private Medical Establishments Act, 2007 (Karnataka Act 21 of 2007), the Government of Karnataka hereby appoints the 10th day of November, 2009 as the date on which all provisions of the said Act shall come into force. By order and in the name of the Governor of Karnataka.

[K.S.SAROJAMMA]
Under Secretary to Government,
Department of Health & Family Welfare

## NOTIFICATION-II

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 11 ಎಫ್‌ಪಿಆರ್ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 04.04.2018.

**ಅಧಿಸೂಚನೆ–**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017 (2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 01) ರ 1ನೇ ಪ್ರಕರಣದ (2) ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು ದಿನಾಂಕ: 04–04–2019ರಿಂದ ಜಾರಿಗೆ ಬರತಕ್ಕದೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ. ಚಿರಂಜೀವಿ)
ಸರ್ಕಾರದ ಉಪ ಕಾರ್ಯದರ್ಶಿ–2
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

2012ರ ಕರ್ನಾಟಕ ಅಧಿನಿಯಮ ಸಂಖ್ಯೆ: 37

(2012ರ ಸೆಪ್ಟೆಂಬರ್ ಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2012**

(2012ರ ಆಗಸ್ಟ್ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(ಪ್ರಕರಣ 3ನ್ನು ಮೂಲ ಅಧಿನಿಯಮದಲ್ಲಿ ಇಂಧಿಕರಿಸಿದೆ.)

****

**2018 ರ ಕರ್ನಾಟಕ ಅಧಿನಿಯಮ ಸಂಖ್ಯೆ: 01**

(2018ರ ಜನವರಿ ತಿಂಗಳ 06ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017**

(2018ರ ಜನವರಿ ತಿಂಗಳ 04ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(ಪ್ರಕರಣ 2,3,4,6,7,8,9,10,11,12,15,16,19 ಹಾಗೂ ಹೊಸ ಪ್ರಕರಣಗಳು ಸೇರ್ಪಡೆ 9ಎ, 11ಎ, 11ಬಿ, 19ಎ ಮತ್ತು 19ಬಿನ್ನು ಮೂಲ ಅಧಿನಿಯಮದಲ್ಲಿ ಇಂಧಿಕರಿಸಿದೆ.)

## 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 33

(2020 ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು (2007 ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಜುಲೈ 31ನೇ ದಿನದಿಂದ ಜಾರಿಗೆ ಬರತಕ್ಕದ್ದು.

(ಪ್ರಕರಣ 4 ಮತ್ತು 16ನ್ನು ಮೂಲ ಅಧಿನಿಯಮದಲ್ಲಿ ಇಂಧಿಕರಿಸಿದೆ.)

**4. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 17) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ವಜುಬಾಯಿ ವಾಲ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ